ಕರ್ನಾಟಕದ ದುಡಿಯುವ ಜನಗಳಿಗೆ
ಮೇ ದಿನದ ಶುಭಾಶಯಗಳು



ಸಂಪುಟ-೧೧ ಸಂಚಿಕೆ-೧೭-೧೮ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಏಪ್ರಿಲ್ ೩೦, ೧೯೮೯ ರೂ. ೨-೦೦

ಕೆಂಪುಚುಕ್ಕಿ

ಕಣ್ಣಾಗಸದ ಕನ್ನಡಿಯ ತುಂಬ
ರೆಕ್ಕೆ ಬಿಚ್ಚಿ ಹಾರಾಡಿದ
ಮುದ್ದು ಹಕ್ಕಿಯೇ
ಬಾನ ಬಣದ ನಡುವೆ
ಕೆಂಪು ಚುಕ್ಕೆಯಾಗಿ
ನಿಂತು ಬಿಟ್ಟೆಯಲ್ಲ
-ನೀಲಾ ಕೆ.

ಪ್ರಜಾಸತ್ತೆಯ ಮೇಲೆ ಮತ್ತೊಂದು ಆಘಾತ

ದೇಶಾದ್ಯಂತ ಪ್ರತಿಭಟನೆ, ರ್‍ಯಾಲಿ, ಕರ್ನಾಟಕ ಬಂದ್

ಕರ್ನಾಟಕದಲ್ಲಿ ಜನತಾದಳ ಸರ್ಕಾರವನ್ನು ವಜಮಾಡಿ ರಾಷ್ಟ್ರಪತಿ ಆಡಳಿತವನ್ನು ಹೇರಿದ ಕೇಂದ್ರ ಸರ್ಕಾರದ ಕ್ರಮ ದೇಶದಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳ ಬಗ್ಗೆ ಸದಾ ಮಸೆಯುತ್ತಿರುವ ಕತ್ತಿಗೆ ಪ್ರಜಾಸತ್ತೆಯ ಮತ್ತೊಂದು ಆಹುತಿ. ಮತ್ತು ತಾವು ಮತ್ತೆ ಚುನಾವಣೆಗಳನ್ನು ಗೆಲ್ಲಲಾರೆವು ಎಂಬುದು ದಿನದಿನಕ್ಕೆ ಖಚಿತವಾಗುತ್ತಾ ಹೋದಂತೆ ಇಂತಹ ಆಘಾತಗಳು ಹೆಚ್ಚುತ್ತಾ ಹೋಗುತ್ತವೆ.

ಕಾಂಗ್ರೆಸ್ಸೇತರಸರ್ಕಾರಗಳನ್ನು ಉರುಳಿಸಲು ಕಾಂಗ್ರೆಸ್ ನಿರಂತರ ಹೂಡುತ್ತಿರುವ ಸಂಚು, ಹಾಕುತ್ತಿರುವ ಗದ್ದಲಗಳು ಎಡಪಕ್ಷಗಳಿಗಂತು ದಿನನಿತ್ಯದ ಅನುಭವ. ಪ. ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಬೇಕೆಂದು ಮಾಡಿದ ಮನವಿ ಅದೆಷ್ಟನೇ ಬಾರಿಯೋ! ಕೇರಳದಲ್ಲಿ ಕಾನೂನು ಸುವ್ಯವಸ್ಥೆಯ ಕುಸಿತ ಮಾಡಲು ಪ್ರಯತ್ನಿಸಿ ವಿಫಲರಾದ ಮೇಲು ಬೊಬ್ಬೆ ಹಾಕಿದ್ದ ರಾಷ್ಟ್ರಪತಿ ಆಡಳಿತದ ಹೇರಿಕೆಗಾಗಿ ಮನವಿ ಮಾಡಿದ್ದುದನ್ನೂ ಪತ್ರಿಕೆಗಳ ಓದುಗರು, ಆಕಾಶವಾಣಿ ದೂರದರ್ಶನ ಕೇಳುಗರು ಕೇಳಿ ಕೇಳಿ ಸಾಕಾಗಿದ್ದರೆ, ಅಲ್ಲಿಯ ರಾಜ್ಯ ಸರ್ಕಾರಗಳ ಪಕ್ಕೆಯಮುಳ್ಳಾಗಿ ವರ್ತಿಸಲೆಂದೆ ನೇಮಿಸಿದ ಕೇರಳದ ಶ್ರೀಮತಿ ರಾಮದುಲ್ಲಾರಿ ಸಿನ್ಹಾ, ಆಂಧ್ರದ ರಾಜ್ಯಪಾಲೆ, ಜೊತೆಗೆ ಹರಿಯಾಣದಲ್ಲಿ ಒಬ್ಬ ಸಿ.ಬಿ.ಐ. ಮೇಲಧಿಕಾರಿಯನ್ನು ರಾಜ್ಯಪಾಲರನ್ನಾಗಿ ನೇಮಿಸಿರುವುದು, ಪ. ಬಂಗಾಳದಲ್ಲಿ ಅಲ್ಲಿಯ ಎಡ ಸರ್ಕಾರದ ಜೊತೆಗೆ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದೇ ಅಪರಾಧವೆಂಬಂತೆ ಅವರ ವರ್ಗಾವಣೆ ಹಾಗೂ ಬೀಳ್ಕೊಡಿಗೆ ಸಂದರ್ಭದಲ್ಲಿ ತೋರಿಸಿದ ಹೀನಾಯವಾದ ವರ್ತನೆ, ಎಲ್ಲಕ್ಕಿಂತ ಮೇಲಾಗಿ ಮತ್ತೊಬ್ಬ ಸಿ.ಬಿ.ಐ. ಅಧಿಕಾರಿಯನ್ನು ಬಂಗಾಳದ ರಾಜ್ಯಪಾಲರನ್ನಾಗಿ ವರ್ಗಾಯಿಸಿರುವುದು - ಇವೆಲ್ಲವೂ ಒಂದೇ ಚಿತ್ರದ ಬೇರೆ ಬೇರೆ ದೃಶ್ಯಗಳೆಂಬಂತೆ ಭಾರತದ ಜನರ ಕಣ್ಣಿಗೆ

★ ಪುಟ ೮ ಕ್ಕೆ

ಮೇ ದಿನಕ್ಕೆ ಸಿದ್ಧತೆ ನಡೆಸಿರಿ

ರಶ್ಯನ್ ಕಾರ್ಮಿಕರು ಮೇ ದಿನ ನಿರ್ಮಿಸಿದರು. ನಾವು ಅನುಸರಿಸೋಣ



ಇದು 1927ರ ಆಸ್ಟ್ರೇಲಿಯಾದ "ಕಾರ್ಮಿಕರು ಪ್ರದರ್ಶಿಸಿದ ಮೇ ದಿನದ ಪೋಸ್ಟರು.

ಇದು 1927 ರಮೇ ದಿನದಂದು ಆಸ್ಟ್ರೇಲಿಯದ ಕಾರ್ಮಿಕರು ಪ್ರದರ್ಶಿಸಿದ ಪೋಸ್ಟರ್. ಅಕ್ಟೋಬರ್ ಕ್ರಾಂತಿ ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿತು. ದುಡಿಯುವ ಜನರ ಅಂತರ್ರಾಷ್ಟ್ರೀಯ ಸಹಕಾರದ ಹೊಸ ವಿಧಾನಗಳನ್ನು ರೂಪಿಸಲು ಪ್ರೇರೇಪಿಸಿತು. ಪಾಶ್ಚಿಮಾತ್ಯ ಸಾಮಾಜಿಕ-ಪ್ರಜಾಪ್ರಭುತ್ವವಾದಿ ಮುಖಂಡರು ಅಕ್ಟೋಬರ್ ಕ್ರಾಂತಿಯನ್ನು ಬಹಿರಂಗವಾಗಿ ವಿರೋಧಿಸಿದ್ದರೂ ವಿಶ್ವದ ಬಹುಪಾಲು ಕಾರ್ಮಿಕರು ಅಕ್ಟೋಬರ್ ಕ್ರಾಂತಿಯನ್ನು ಬೆಂಬಲಿಸಿದರು. ಆದ್ದರಿಂದ 1918 ರ ಮೇದಿನವನ್ನು ಆ ಮುಖಂಡರು ಬಹಿರಂಗವಾಗಿ ವಿರೋಧಿಸಲಾಗಲಿಲ್ಲ. ಆ ಮೇದಿನ ಯುರೋಪಿನಾದ್ಯಂತ ಯುದ್ಧ-ವಿರೋಧಿ ಘೋಷಣೆಗಳು, ರಶ್ಯನ್ ಕ್ರಾಂತಿಯನ್ನು ಬೆಂಬಲಿಸುವ ಘೋಷಣೆಗಳು ಮೊಳಗಿದವು. ಬಂಡವಾಳಶಾಹಿ ದೇಶಗಳು ರಶ್ಯನ್ ಕ್ರಾಂತಿಯ ಕತ್ತು ಹಿಸುಕಲು ಯತ್ನಿಸಿದಾಗ ವಿಶ್ವಾದ್ಯಂತ ಲಕ್ಷಾಂತರ ಕಾರ್ಮಿಕರು "ರಶ್ಯಾವನ್ನು ಮುಟ್ಟಬೇಡಿ" ಆಂದೋಲನದಲ್ಲಿ ಭಾಗವಹಿಸಿದರು.

ಮೇ ದಿನದ ಇತಿಹಾಸದ ಪುಟಗಳಿಂದ ಇನ್ನೂ ಕೆಲವು ಚಿತ್ರಗಳು

ಭಾರತದ ಸ್ವರೂಪವನ್ನೇ ಬದಲಾಯಿಸುವ ಪ್ರಶ್ನೆ

ಏಪ್ರಿಲ್ 18 ರಂದು ನವದೆಹಲಿಯಲ್ಲಿ ಸೇರಿದ್ದ ಅಖಿಲ ಭಾರತ ಭೂಸುಧಾರಣಾ ಸಮಾವೇಶ ಅನೇಕ ರೀತಿಯಲ್ಲಿ ಒಂದು ವಿಶಿಷ್ಟ ಸಮಾವೇಶ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅಂದಿನ ಸಾಮಾಜಿಕ ಆರ್ಥಿಕ ಪರಿಸ್ಥಿತಿಯಲ್ಲಿ ಪಾಳೆಯಗಾರಿ ಭೂಮಾಲಿಕರ ತುಳಿತಕ್ಕೆ ಒಳಗಾಗಿದ್ದ ಗೇಣಿದಾರ ಬಡರೈತರ ಮುಖ್ಯ ಪ್ರಶ್ನೆ ಭೂಪ್ರಶ್ನೆ . ಹಾಗೂ ಅದಕ್ಕಾಗಿ ಹೋರಾಟ ಇಡೀ ದೇಶದಲ್ಲಿ ನಿನಾದಗೊಂಡಿತು. ಕೋಟಿ ಕೋಟಿ ರೈತರ ಹೃದಯಗಳಲ್ಲಿ ಪ್ರತಿಧ್ವನಿಗೊಂಡಿತು. ತೆಲಂಗಾಣ, ತೇಭಾಗ, ಪುನ್ನಪ್ರ ವೆಯಲಾರ್ , ಬಿಹಾರ್ , ಸುರ್ಮಾಕಣಿವೆ (ಅಸ್ಸಾಂಪ್ರದೇಶ) ಪೆಪ್ಸು (ಪಂಜಾಬಿನ ಒಂದು ಭಾಗ) ಇಲ್ಲಿ ಲಕ್ಷಾಂತರ ರೈತರು ಸಮರಧೀರ ಹೋರಾಟಕ್ಕೆ ಸಜ್ಜಾದರು. ಬಿಳಿಯರ ಸಾಮ್ರಾಜ್ಯಶಾಹಿ ಪ್ರಭುತ್ವದ ಸರ್ವಶಕ್ತಿಯನ್ನು ಸೆಣಸಿದರು. ಇದೇ ಭೂಮಿಯ ಪ್ರಶ್ನೆ 40 ವರ್ಷಗಳ ಭೂಸುಧಾರಣೆಯ ನಂತರವು ಎದ್ದೆದ್ದು ಬರುತ್ತಿರುವ ಸಮಸ್ಯೆ ಭಾರತದ ರೈತರ ಬಹುಭಾಗವನ್ನು ದಿನನಿತ್ಯ ಕಾಡುತ್ತಿರುವ ಪ್ರಶ್ನೆಯಾಗಿದೆ. 'ಭೂಮಿಯನ್ನು ಕೊಡಿ' ಎಂಬ ಘೋಷಣೆ ಭಾರತದ ಮೂಲೆ ಮೂಲೆಗಳಿಂದ ವಿವಿಧ ರೂಪಗಳಲ್ಲಿ ಕೇಳಿಬರುತ್ತಿದೆ.

ಭಾರತದ ಕ್ರಾಂತಿಯ ಕೀಲಿಗೈಯಾದ ಭೂಪ್ರಶ್ನೆಯ ಬಗ್ಗೆ ಸಮಾವೇಶನವೊಂದು ನಡೆದು ಭಾರತದ ವಿವಿಧ ಪ್ರದೇಶಗಳ ವಿಭಿನ್ನ ಪರಿಸ್ಥಿತಿಯನ್ನು ಕ್ರೋಢೀಕರಿಸಿ ಏಕರೂಪದ ತಿಳುವಳಿಕೆಗೆ ಬರಲಾಯಿತು ಎಂಬುದು ಒಂದು ಪ್ರಮುಖ ಸಂಗತಿ. ಭಾರತದ ಎಡ ಪಕ್ಷಗಳ ನೇತೃತ್ವದ ರೈತ ಹಾಗು ಕೃಷಿ ಕೂಲಿಕಾರ ಸಂಘಟನೆಗಳು ಪರಸ್ಪರ ಸಮಾಲೋಚನೆಯ ಆಧಾರದಲ್ಲಿ ಬಂದು ಈ ಒಟ್ಟು ತಿಳುವಳಿಕೆಯ ಆಧಾರದಲ್ಲಿ ಭೂಮಿ ಪ್ರಶ್ನೆಯೊಂದರ ಮೇಲೆ, ಅದರ ವಿವಿಧ ಮಗ್ಗುಲುಗಳ ಮೇಲೆ ಕೇಂದ್ರೀಕರಿಸಿ ಹೋರಾಟದ ಕಣಕ್ಕಿಳಿದಿರುವುದು ಮತ್ತೊಂದು ಪ್ರಮುಖ ಸಂಗತಿ.

ಆದರೆ ಎಲ್ಲಕ್ಕಿಂತ ಮಿಗಿಲಾಗಿ ಇಡೀ ದೇಶದ ಸ್ವರೂಪವನ್ನು ಬದಲಾಯಿಸುವ ಈ ಸಮಸ್ಯೆಗಾಗಿ ನೇರಕ್ರಮಕ್ಕೆ, ತಿಂಗಳು ಗಟ್ಟಲೆ, ಸುದೀರ್ಘವಾದ ಹೋರಾಟಕ್ಕೆ ಇಳಿಯುತ್ತೇವೆ ಎಂದು ದೇಶದ ಮೂಲೆಮೂಲೆಯ ಪ್ರತಿನಿಧಿಗಳೊಟ್ಟಾಗಿ ತೊಟ್ಟಪಣ, ಇದು ಈ ಸಮಾವೇಶದ ವೈಶಿಷ್ಟ್ಯ.

★ ಪುಟ ೮ ಕ್ಕೆ

ಒಳ ಪುಟಗಳಲ್ಲಿ

ಪುಟ 4-5
ಲ್ಯಾಟಿನ್ ಅಮೆರಿಕಾದ ಒಡಲಲ್ಲಿ ಕ್ರಾಂತಿಯ ಲಾವಾರಸ

ಪುಟ-2
ವಿಚ್ಛಿದ್ರಕಾರಿಗಳ ವಿರುದ್ಧ ಎಚ್ಚೆಲ್-ಕೇಂದ್ರ ಸಮಿತಿ ಕರೆ

ಮೇ ದಿನದ ಸಂದರ್ಭದಲ್ಲಿ
ದ್ವಿತೀಯ ಅಂತರ್ರಾಷ್ಟ್ರೀಯ ಕರೆಗೆ ನೂರು ವರ್ಷ : ಪುರವಣಿ-I
ಮೇ ದಿನ 1989: ಇತಿಹಾಸದ ಘೋಷಿತ ತೀರ್ಪನ್ನು ಕಾರ್ಮಿಕ ವರ್ಗ ದೇಶಾದ್ಯಂತ ಪುನರುಚ್ಚರಿಸಬೇಕು -ಬಿ.ಟಿ.ಆರ್. : ಪುರವಣಿ -II
ಸಿ.ಐ.ಟಿ.ಯು. ಮೇ ದಿನ ಪ್ರಣಾಳಿಕೆಯಿಂದ ಪುಟ -2 ಪುರವಣಿ III

ಕೇಂದ್ರ ಸಮಿತಿ ಹೇಳಿಕೆ

ಕೋಮುವಾದಿ, ಛಿದ್ರಕಾರಿಗಳ ವಿರುದ್ಧ ಎದ್ದೇಳಿ

ಭಾರತದ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ದೆಹಲಿಯಲ್ಲಿ ಏಪ್ರಿಲ್ 6ರಿಂದ 10ರವರೆಗೆ ಸಭೆ ಸೇರಿತ್ತು. ಪಕ್ಷದ ಮಹಾಧಿವೇಶನದ ನಂತರ ಪ್ರಥಮ ಬಾರಿಗೆ ಸೇರಿದ ಸಭೆ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ವಿದ್ಯಮಾನಗಳ ಬಗೆಗೆ ಚರ್ಚಿಸಿತು. ಇದರ ಸಾರಾಂಶವಾದ ಪತ್ರಿಕಾ ಹೇಳಿಕೆಯ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

ಕಾಶ್ಮೀರದಲ್ಲಿ ಬಿಕ್ಕಟ್ಟು

ಕಾಶ್ಮೀರದಲ್ಲಿ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದೆ. ಮೂಲಭೂತವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ಆಟಾಟೋಪ ಮುಗಿಲು ಮುಟ್ಟಿದೆ. ಪಾಕಿಸ್ತಾನದ ಕುಮ್ಮಕ್ಕಿನಿಂದ, ವಿದೇಶಿ ಪ್ರತಿಗಾಮಿ ಶಕ್ತಿಗಳಿಂದ ಸಾಕಲ್ಪಡುತ್ತಿರುವ ಈ ಶಕ್ತಿಗಳು ಭಾರತದಿಂದ ಪ್ರತ್ಯೇಕವಾಗುವ, ಅದಕ್ಕಾಗಿ ಹಿಂಸಾಚಾರಕ್ಕಿಳಿಯಲು ಬಹಿರಂಗ ಆಹ್ವಾನ ನೀಡುತ್ತಿದ್ದಾರೆ. ರಾಜ್ಯ ಸರ್ಕಾರ ಪರಿಸ್ಥಿತಿಯನ್ನು ಹತೋಟಿಗೆ ತರುವಲ್ಲಿ ವಿಫಲವಾಗಿದೆ. ಶಕ್ತಿ ಹೀನವಾಗಿದೆ. ಪೊಲೀಸು, ಸೈನ್ಯಗಳ ಬಳಕೆ ಮತ್ತು ಹಲವೆಡೆ ಕರ್ಫ್ಯೂ ಪರಿಸ್ಥಿತಿಯ ಗಂಭೀರತೆ ತೋರಿಸುತ್ತದೆ. ಈಗ ಭೂತಾರವಾಗಿ ಬೆಳೆದಿರುವ ಪಂಜಾಬು ಸಮಸ್ಯೆಯ ಮಾದರಿ ಬೆಳವಣಿಗೆಯ ಅಪಾಯ ಸ್ಪಷ್ಟವಾಗಿ ಗೋಚರವಾಗುತ್ತಿದೆ ಎಂದಿದೆ ಕೇಂದ್ರ ಸಮಿತಿ.

ಪಂಜಾಬು ನೆನೆಗುದಿಗೆ

ಪಂಜಾಬು ಪರಿಸ್ಥಿತಿ ಯಾವುದೇ ರೀತಿಯಲ್ಲಿ ಉತ್ತಮಗೊಂಡಿಲ್ಲ ಎಂದು ಕೇಂದ್ರ ಸಮಿತಿ ತೀವ್ರ ಕಳವಳ ವ್ಯಕ್ತಪಡಿಸಿದೆ. ಭಯೋತ್ಪಾದಕರು ಹೇಳಿದಂತೆ ಕುಣಿಯದ ಯಾವುದೇ ವ್ಯಕ್ತಿಯ ಪ್ರಾಣ ಮತ್ತು ಆಸ್ತಿಪಾಸ್ತಿ ಸುರಕ್ಷಿತವಾಗಿಲ್ಲ. ರಾಜಕೀಯ, ಕೋಮು ಭಿನ್ನತೆಗಳನ್ನು ಮರೆತು ಭಯೋತ್ಪಾದಕರಿಗೆ ಪ್ರತಿರೋಧ ಒಡ್ಡಲು ಜನರನ್ನು ಅಣಿ ನೆರೆಸುವುದಕ್ಕೆ ರಾಜ್ಯ ಮತ್ತು ಕೇಂದ್ರದ ಆಡಳಿತ ಹಿಂದೇಟು ಹೊಡೆಯುತ್ತಿದೆ. ನಿರಾಕರಿಸುತ್ತಿದೆ. ಅದರ ಬದಲು ಕಾಂಗ್ರೆಸ್(ಐ) ಪಕ್ಷ ಮತ್ತು ಕೇಂದ್ರ ಸರ್ಕಾರ ಇಂತಹ ಗಂಭೀರ ಪರಿಸ್ಥಿತಿಯನ್ನು ತನ್ನ ರಾಜಕೀಯ ಚದುರಂಗ ದಾಟಕ್ಕೆ ಬಳಸುತ್ತಿದೆ.

ಕೇಂದ್ರ ಸಮಿತಿ ಮಾ. 29ರಂದು ಎಡಪಕ್ಷಗಳು ನಡೆಸಿದ ಧರಣಿ ಸತ್ಯಾಗ್ರಹ ಮತ್ತು ಸಿ.ಪಿ.ಐ., ಸಿ.ಪಿ.ಐ.(ಎಂ) ಏ. 13ರಂದು 'ಪಂಜಾಬ್‌ದಿನ'ವಾಗಿ ಆಚರಿಸಲು ಮುಂದಾಗಿರುವುದನ್ನು ಸ್ವಾಗತಿಸಿದೆ. ಪಂಜಾಬು ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕಲು ದೇಶಾದ್ಯಂತ ಪ್ರಬಲ ಚಳುವಳಿ ರೂಪಿಸಲು ಕೇಂದ್ರ ಸಮಿತಿ ಕರೆಯಿತ್ತಿದೆ.

ಆರೆಸ್ಸೆಸ್ ಸಂಚು ವಿಫಲಗೊಳಿಸಿ

"ಹಿಂದೂ ದೇವಾಲಯಗಳನ್ನು ಹಿಂದೂಗಳಿಗೆ ಮರಳಿಸಲು" ಪ್ರಚಾರ-ಪ್ರಕ್ಷೋಭೆ ನಡೆಸಲು ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್ ಮತ್ತು ಬಿಜೆಪಿ ಸಂಚನ್ನು ಕೇಂದ್ರ ಸಮಿತಿ ಗಮನಿಸದೆ ಹೆಡ್ಗೇವಾರ್ ಶತಾಬ್ದಿ ಹೆಡ್ಗೇವಾರ್ ಶತಾಬ್ದಿ ಆಚರಣೆಯನ್ನು 'ರಾಮಜನ್ಮಭೂಮಿ ದೇವಾಲಯವನ್ನು ಪ್ರತಿ ಹಳ್ಳಿಯಿಂದ ತಂದ ತಲಾ ಒಂದು ಇಟ್ಟಿಗೆಯಿಂದ ಕಟ್ಟುವ' ಘೋಷಣೆ ದೇಶದ ಉದ್ದಗಲಕ್ಕೂ ಪ್ರಚಾರ ಮಾಡಲು, ಈ ಬಗ್ಗೆ ಕೋಮು ಉದ್ರೇಕ ಬಡಿದೆಬ್ಬಿಸಲು ಆ ಮೂಲಕ ಭಾರಿ ಪ್ರಮಾಣದಲ್ಲಿ ಹಿಂದೂ-ಮುಸ್ಲಿಂ ಕೋಮುಗಲಭೆ ಹಬ್ಬಿಸಲು ಬಳಸುವ ಸಂಚು ಸ್ಪಷ್ಟವಾಗಿ ಕಾಣುತ್ತಿದೆ. 'ರಾಮ ಜನ್ಮಭೂಮಿ'ಯ ಬಗ್ಗೆ ಯಾವುದೇ ಒಪ್ಪಂದಕ್ಕೆ ಬಿಜೆಪಿ ತಯಾರಿಲ್ಲ ಎಂಬ ವಾಜಪೇಯಿ ಹೇಳಿಕೆಯನ್ನು ಕೇಂದ್ರ ಸಮಿತಿ ಕಟುವಾಗಿ ಟೀಕಿಸಿದೆ.

ಇಂತಹ ಭೀಕರ ಪರಿಸ್ಥಿತಿಯಲ್ಲೂ ಪ್ರಧಾನಮಂತ್ರಿಗೆ ರಾಷ್ಟ್ರೀಯ ಸಮಗ್ರತಾ ಪರಿಷತ್ತಿನ ಸಭೆಯನ್ನು ಕರೆಯುವ ಅಗತ್ಯವೆಂದು ಕಂಡಿಲ್ಲ ಎಂಬ ಬಗ್ಗೆ ಕೇಂದ್ರ ಸಮಿತಿಅಚ್ಚರಿ ವ್ಯಕ್ತಪಡಿಸಿದೆ. ಸಾರ್ವಜನಿಕ ಅಭಿಪ್ರಾಯ ಇಂತಹ ಪ್ರಚಾರದ ವಿರುದ್ಧ ಕ್ರೋಢೀಕರಿಸಬೇಕು ಎಂದೂ ಅವರಿಗೆ ಅನ್ನಿಸಿಲ್ಲ.

ಈ ಸಂದರ್ಭದಲ್ಲಿ ಎಡಪಕ್ಷಗಳು ಮೇ 11ರಂದು ದೆಹಲಿಯಲ್ಲಿ ಸಮಾವೇಶವನ್ನು ಕರೆದಿರುವದರ ಬಗ್ಗೆ ಕೇಂದ್ರ ಸಮಿತಿ ಮೆಚ್ಚುಗೆ ವ್ಯಕ್ತಪಡಿಸಿದೆ. ಈ ಸಮಾವೇಶವನ್ನು ಸಫಲಗೊಳಿಸಲು ಮತ್ತು ಇದರ ಸಂದೇಶವನ್ನು ಜನತೆಗೆ ಒಯ್ಯಲು ಸ್ಥಳೀಯ ಹಂತಗಳಲ್ಲೂ ಸಮಾವೇಶಗಳನ್ನು ನಡೆಸಲು ಕೇಂದ್ರ ಸಮಿತಿ ಜಾತ್ಯಾತೀತ ಶಕ್ತಿಗಳಿಗೆ ವಿಶಾಲ ಐಕ್ಯತೆ ಸಾಧಿಸುವಂತೆ ಕರೆ ನೀಡಿದೆ.

ಠಕ್ಕರ್ ಆಯೋಗ: ಸಾಮ್ರಾಜ್ಯಶಾಹಿಯನ್ನು ಬಯಲುಪಡಿಸಿ

ರಾಜೀವ್‌ಗಾಂಧಿಯವರು ಇಂದಿರಾ ಹತ್ಯೆಯಲ್ಲಿ ವಿರೋಧ ಪಕ್ಷಗಳು ಶಾಮೀಲಾಗಿವೆ ಎಂದು ಮಾಡಿರುವ ಗುರುತರ ಆಪಾದನೆ ಬಗ್ಗೆ ಕೇಂದ್ರ ಸಮಿತಿ ದಿಗ್ಭ್ರಮೆ ವ್ಯಕ್ತಪಡಿಸಿದೆ. ದೇಶದ ಆಡಳಿತದ ಉಚ್ಚ ಸ್ಥಾನದಲ್ಲಿದ್ದು, ಹತ್ಯೆಗೆ ಸಂಬಂಧಿಸಿದ ಎಲ್ಲರನ್ನೂ ಶಿಕ್ಷಿಸುವುದು ಅವರ ಜವಾಬ್ದಾರಿ. ಅದನ್ನು ಬಿಟ್ಟು ಸಾಮ್ರಾಜ್ಯಶಾಹಿಗಳ ಜತೆ ಸಂಚು ನಡೆಸಿದ ಅವರ ಸಾಕು ನಾಯಿಗಳನ್ನು ರಕ್ಷಿಸಲು ಅವರ ಸರ್ಕಾರ ಎಲ್ಲಾ ಪ್ರಯತ್ನಗಳನ್ನೂ ನಡೆಸಿದೆ.

ಠಕ್ಕರ್ ಆಯೋಗದ ವರದಿಯನ್ನು ಸಾರ್ವಜನಿಕರು ಮತ್ತು ಪಾರ್ಲಿಮೆಂಟಿನಿಂದ ಬಚ್ಚಿಡುವ ಪ್ರಯತ್ನಗಳು ವಿಫಲವಾದಾಗ, ಸಂಚಿನ ಸಾಮ್ರಾಜ್ಯಶಾಹಿ ಸಂಬಂಧಗಳನ್ನು ಬಯಲಿಗೆಳೆಯುವ ವರದಿ ಭಾಗವನ್ನು ಬಿಟ್ಟು ಉಳಿದ ಭಾಗಗಳನ್ನು ಮಾತ್ರ ಬಹಿರಂಗಗೊಳಿದೆ ರಾಜೀವ್ ಸರ್ಕಾರ.

ಇಂದಿರಾ ಹತ್ಯೆಯ ಕೆಲವು ಗಂಟೆಗಳಲ್ಲೇ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಇದು ಸಾಮ್ರಾಜ್ಯಶಾಹಿಗಳು ಶಾಮೀಲಾಗಿರುವ ಭಯೋತ್ಪಾದಕ ಕೃತ್ಯ ಮತ್ತು ಇದು ದೇಶವನ್ನು ಛಿದ್ರಗೊಳಿಸುವ ಸಂಚು ಎಂದು ಹೇಳಿಕೆ ನೀಡಿತ್ತು.

ಕೇಂದ್ರ ಸಮಿತಿ ನಿಜವಾದ ಹತ್ಯೆಯ ಸಂಚುಕಾರರನ್ನು ರಕ್ಷಿಸುತ್ತಾ, ವಿರೋಧ ಪಕ್ಷಗಳ ಮೇಲೆ ಪೊಳ್ಳು ಆಪಾದನೆಗಳನ್ನು ಮಾಡುವ ಪ್ರಧಾನಮಂತ್ರಿಗಳ ಪ್ರಯತ್ನಗಳನ್ನು ಬಲವಾಗಿ ಖಂಡಿಸಿದೆ.

ಕಾಂಗ್ರೆಸ್ ಬಿಕ್ಕಟ್ಟು

ಎಲ್ಲಾ ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲೂ- ಅದರಲ್ಲೂ ರಾಜಸ್ಥಾನ ಮತ್ತು ಗುಜರಾತಿನಲ್ಲಿ ತೀವ್ರವಾಗಿ ಕಾಂಗ್ರೆಸ್ ಒಳಜಗಳಗಳು ಬಿಕ್ಕಟ್ಟಿನ ಪರಿಸ್ಥಿತಿ ಮುಟ್ಟಿದೆ. ಈಗಾಗಲೇ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿರುವ ಜನತೆ, ಕಾಂಗ್ರೆಸ್ ಬಿಕ್ಕಟ್ಟಿನಿಂದ ದಿಕ್ಕೆಟ್ಟಿರುವ ಆಡಳಿತದಿಂದ ಇನ್ನಷ್ಟು ತೀವ್ರ ಸಮಸ್ಯೆ ಗೊಳಗಾಗಿದೆ. ಕಾಂಗ್ರೆಸ್ ಕೇಂದ್ರ ನಾಯಕತ್ವ ಒಳಜಗಳ ಪರಿಹರಿಸಲಾಗದೆ ಅಸಹಾಯಕವಾಗಿ ನೋಡುತ್ತಿದೆ.

ಬೋಡೋ ಚಳುವಳಿ

ಬೋಡೋ ಚಳುವಳಿಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುತ್ತಾ ಇಂತಹ ಚಳುವಳಿಗೆ ಒಂದು ರಾಜ್ಯದೊಳಗೆ ಬುಡಕಟ್ಟು ಜನಾಂಗಗಳಿಗೆ ಪ್ರಾದೇಶಿಕ, ಸ್ಥಳೀಯ ಸ್ವಾಯತ್ತತೆಯ ಆಧಾರದ ಮೇಲೆ ಮಾತ್ರ ಪರಿಹಾರ ಸಾಧ್ಯ ಎಂದು ಅಭಿಪ್ರಾಯಪಟ್ಟಿದೆ. ಈವರೆಗೆ ಅಸ್ಸಾಂ ಸರ್ಕಾರ ಚಳುವಳಿಯನ್ನು ಅಸಮರ್ಥವಾಗಿ ನಿರ್ವಹಿಸಿದೆ, ಮತ್ತು ಇನ್ನು ಮುಂದಾದರೂ ಶಾಂತಿಯುತ ಮಾತುಕತೆಗಳ ಮೂಲಕ ಪರಿಹಾರ ಹುಡುಕಲು ಪ್ರಯತ್ನಿಸುವುದೆಂಬ ಆಶಯವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ.

ಎಡ ಮುನ್ನಡೆ

ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ.ಗಳ ಸಮನ್ವಯ ಸಮಿತಿ ಬಗ್ಗೆ ವರದಿಯನ್ನು ಆಲಿಸಿದ ಕೇಂದ್ರ ಸಮಿತಿ, ಎರಡು ಪಕ್ಷಗಳು ಮತ್ತಿತರ ಎಡ ಪಕ್ಷಗಳ ಜತೆ ಐಕ್ಯ ಕಾರ್ಯಾಚರಣೆ ಬಗ್ಗೆ ಮಾತುಕತೆ ಮುಂದುವರಿಸಬೇಕೆಂದು ಪಿ.ಬಿ.ಗೆ ನಿರ್ದೇಶನ ನೀಡಿತು.

ದುರ್ಭರ ಆರ್ಥಿಕ ಸ್ಥಿತಿ

ಅವಶ್ಯಕ ವಸ್ತುಗಳ ಬೆಲೆ ಏರುತ್ತಿರುವುದನ್ನು ತೀವ್ರವಾಗಿ ಪರಿಗಣಿಸಿರುವ ಕೇಂದ್ರ ಸಮಿತಿ ಸಾಮಾನ್ಯ ಬಜೆಟ್ ರೈಲ್ವೆ ಬಜೆಟ್ ಮತ್ತಿತರ ಆಡಳಿತಾತ್ಮಕ ಕ್ರಮಗಳಿಂದ ಸಾಮಾನ್ಯನ ಹೊರೆ ಹೆಚ್ಚಿವೆ ಎಂದು ಗಮನಿಸಿದೆ. ನಿರುದ್ಯೋಗ ಕಾರ್ಖಾನೆ ಮುಚ್ಚುವಿಕೆ, ರೈತರಿಗೆ ಲಾಭದಾಯಕ ಬೆಲೆಗಳ ಅಭಾವದ ಸಮಸ್ಯೆಗಳು ಇನ್ನೂ ದುರ್ಭರವಾಗಿವೆ. ಒಂದು ಲಕ್ಷ ಕೋಟಿ ರೂ.ಗಳಿಗೆ ಹತ್ತಿರವಾಗುತ್ತಿರುವ ವಿದೇಶಿ ಸಾಲ ಬಿಕ್ಕಟ್ಟಿಗೆಡೆ ಮಾಡಿಕೊಡುತ್ತಿದೆ. ಇನ್ನೂ ಹೆಚ್ಚಿನ ಸಾಲ ಸವಲತ್ತುಗಳಿಗೆ ಎಂಜಲೊಡ್ಡಿ ನಿಂತಿರುವ ರಾಜೀವ್ ಸರ್ಕಾರ ದೇಶದ ಹಿತಾಸಕ್ತಿಗಳನ್ನು ಇನ್ನಷ್ಟು ಒತ್ತೆಯಾಗಿಡುವ ಅಪಾಯ ಹೆಚ್ಚಿದೆ.

ಈ ಸಂದರ್ಭದಲ್ಲಿ ಏಪ್ರಿಲ್ 18ರಂದು ಎಡ ರೈತ ಸಂಘಟನೆಗಳು ಕರೆದಿರುವ ಭೂಸುಧಾರಣೆ ಸಮಾವೇಶಕ್ಕೆ ಕೇಂದ್ರ ಸಮಿತಿ ತನ್ನ ಬೆಂಬಲ ವ್ಯಕ್ತಪಡಿಸಿ ದುಡಿಯುವ ಜನತೆಯ ಸಂಘಟನೆಗಳಿಗೆ ಹೋರಾಟಗಳನ್ನು ನಡೆಸುವಂತೆ ಕರೆ ಇತ್ತಿದೆ.

ಅಫ್‌ಘಾನಿಸ್ತಾನ

ಜಿನೀವಾ ಒಪ್ಪಂದವನ್ನು ಬಟ್ಟಾಬಯಲಾಗಿ ಮುರಿಯುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಅವರ ಏಜೆಂಟರನ್ನು ಬಲವಾಗಿ ಖಂಡಿಸುತ್ತಾ, ಇದರಿಂದ ಅಫ್‌ಘಾನಿಸ್ತಾನದಲ್ಲುಂಟಾಗಿರುವ ಆಂತರಿಕ ಯುದ್ಧದ ಪರಿಸ್ಥಿತಿ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಪಾಕಿಸ್ತಾನದ ಸೈನ್ಯ ಮುಜಹಿದೀನರ ದಾಳಿಗಳಲ್ಲಿ ಸ್ವತಃ ಭಾಗವಹಿಸುತ್ತಿದ್ದು, ಅಫ್‌ಘಾನಿಸ್ತಾನದ ಸ್ವಾತಂತ್ರ ಮತ್ತು ಸಾರ್ವಭೌಮತೆಯಲ್ಲಿ ಮಧ್ಯಪ್ರವೇಶ ನಡೆಸುತ್ತಿರುವ ಪಾಕಿಸ್ತಾನಿ ಮಿಲಿಟರಿ ಕೂಟವನ್ನು ಬಲವಾಗಿ ಖಂಡಿಸಿದೆ. ತಮ್ಮ ಕ್ರಾಂತಿಯ ರಕ್ಷಣೆಗೆ ಧಿರೋದಾತ್ತ ಹೋರಾಟ ನಡೆಸಿರುವ ಅಫ್‌ಘಾನ್‌ರವನ್ನು ಅಭಿನಂದಿಸುತ್ತಾ, ಜಿನೀವಾ ಒಪ್ಪಂದದ ಪಾಲನೆಗೆ ಭಾರತ ನಿರ್ಲಿಪ್ತ ರಾಷ್ಟ್ರಗಳ ಕೂಟವನ್ನು ಮತ್ತು ಅಂತರ್ರಾಷ್ಟ್ರೀಯ ಅಭಿಪ್ರಾಯವನ್ನು ಅಣಿ ನೆರೆಸಲು ಕರೆ ಕೊಟ್ಟಿದೆ.

ನಮೀಬಿಯಾ

ಸ್ವಾಪೋಹೋರಾಟಗಾರರ ಮೇಲೆ ದ.ಆಫ್ರಿಕಾ ಸೈನ್ಯದ ಅನಾವಶ್ಯಕ ದಾಳಿಯನ್ನು ಖಂಡಿಸುತ್ತಾ, ನಮೀಬಿಯನ್ ಸ್ವಾತಂತ್ರದ ವೇಳಾಪಟ್ಟಿಯನ್ನು ಹಿಂದಕ್ಕೆ ಹಾಕುವ ಧೂರ್ತ ಪ್ರಯತ್ನ ಎಂದಿದೆ. ವಿಶ್ವ ಸಂಸ್ಥೆಯ ಪಡೆಗಳಲ್ಲಿ ಏರಿಕೆ, ದ.ಆಫ್ರಿಕಾ ಪಡೆಗಳಲ್ಲಿ ಕಡಿತಗಳನ್ನು ವಿಶ್ವಸಂಸ್ಥೆ ನಿರ್ಣಯ (ನಂಬ್ರ 435)ಯ ಆಧಾರದ ಮೇಲೆ ಜಾರಿಗೆ ತರಬೇಕು.

ನಮೀಬಿಯನ್ ಸ್ವಾತಂತ್ರಕ್ಕೆ ಧಕ್ಕೆ ಬಾರದಂತೆ ಹೋರಾಡಲು ಅಂತರ್ರಾಷ್ಟ್ರೀಯ ಅಭಿಪ್ರಾಯ ರೂಪಿಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಸಿ.ಐ.ಟಿ.ಯು: ಮೇ ದಿನ ಪ್ರಣಾಳಿಕೆ

ಕಾರ್ಮಿಕ ಆಂದೋಲನದ ಪೂರ್ಣ ಶಕ್ತಿಯ ಒಗ್ಗಟ್ಟಿಗೆ ಕರೆ

ನಿರುದ್ಯೋಗ, ದಾರಿದ್ರಗಳ ಶಾಪದಿಂದ ವಿಮೋಚನೆಗೊಳ್ಳಲು ಕಾರ್ಮಿಕ ವರ್ಗ ತನ್ನ ಬಲವನ್ನು ಸಾಕಷ್ಟು ಹೆಚ್ಚಿಸಿಕೊಂಡು ಈಗಿನ ಸಾಮಾಜಿಕ ವ್ಯವಸ್ಥೆಯನ್ನು, ಬಂಡವಾಳಶಾಹಿ ದಾರಿಯನ್ನು ಮತ್ತು ಬೂರ್ಜ್ವಾ-ಭೂಮಾಲಕ ಆಳ್ವಿಕೆಯನ್ನು ಸಂಪೂರ್ಣವಾಗಿ ಬದಲಿಸಬೇಕು ಎಂಬುದನ್ನು ಕಾರ್ಮಿಕ ವರ್ಗ ನೆನಪಿಸಿಕೊಳ್ಳಬೇಕು ಎಂದು ಸಿ.ಐ.ಟಿ.ಯು. 1989ರ ಮೇ ದಿನದ ಪ್ರಣಾಳಿಕೆಯಲ್ಲಿ ಮನವಿ ಮಾಡಿಕೊಂಡಿದೆ. ಇದನ್ನು ಬದಲಿಸದೆ ಶೋಷಣೆಯಿಂದ ಮುಕ್ತಿ, ಸಮಾಜವಾದದ ಸ್ಥಾಪನೆ ಸಾಧ್ಯವಿಲ್ಲ. ಮೇ ದಿನದಂದು ರಾಜೀವ ಸರ್ಕಾರವನ್ನು ಅಧಿಕಾರದಿಂದ ಇಳಿಸಲು ಸದ್ಯದ ಆರ್ಥಿಕ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸರಿಪಡಿಸಲು ಮತ್ತು ಸಮಾಜವಾದಕ್ಕಾಗಿ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಿಸಲು ಎಲ್ಲರೂ ರಾಷ್ಟ್ರೀಯ ಐಕ್ಯತೆಯ ಬಾವುಟವನ್ನು ಎತ್ತಿ ಹಿಡಿಯಬೇಕೆಂದು ಮೇ ದಿನದ ಪ್ರಣಾಳಿಕೆ ಕರೆ ನೀಡಿದೆ.

ವಿಶ್ವದ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ಸೌಹಾರ್ದತೆ ಮತ್ತು ಸಹೋದರತ್ವದ ಮೇ ದಿನದ ಸಂದರ್ಭದಲ್ಲಿ ಸಿ.ಐ.ಟಿ.ಯು. ಪ್ರಕಟಿಸಿದ ಮೇ ದಿನ ಪ್ರಣಾಳಿಕೆ ಭಾರತದ ಕಾರ್ಮಿಕ ವರ್ಗಕ್ಕೆ ಮೇ ದಿನದ ಹಾರ್ದಿಕ ಶುಭಾಶಯ ಕೋರಿದೆ. ಭಾರತದ ಕಾರ್ಮಿಕ ವರ್ಗದ ಪರವಾಗಿ ಸಮಾಜವಾದೀ ದೇಶಗಳ ಕಾರ್ಮಿಕ ವರ್ಗ ಮತ್ತು ಜನತೆಗೆ, ಬೃಹತ್ ಪ್ರಮಾಣ ನಿರುದ್ಯೋಗ ಮತ್ತು ಪ್ರಭುತ್ವ ಗುತ್ತೇದಾರಿ ಆಳ್ವಿಕೆಯ ಹಲ್ಲೆಗಳ ವಿರುದ್ಧ ಹೋರಾಡುತ್ತಿರುವ ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗಕ್ಕೆ ತಮ್ಮ ರಾಷ್ಟ್ರೀಯ ಸಾರ್ವಭೌಮತ್ವ ಮತ್ತು ಸಮಗ್ರತೆಯ ರಕ್ಷಣೆಗಾಗಿ ವೀರ ಹೋರಾಟದಲ್ಲಿ ನಿರತವಾಗಿರುವ ಅಫ್‌ಘಾನಿಸ್ತಾನದ ಜನತೆಗೆ, ಅಮೆರಿಕನ್ ಆಕ್ರಮಣ ಎದುರಿಸುವಲ್ಲಿ ನಿರತರಾಗಿರುವ ಮಾನವ ಇತಿಹಾಸದಲ್ಲಿ ಹೊಸ ಘಟ್ಟವೊಂದನ್ನು ಆರಂಭಿಸುತ್ತಿರುವ ಮೂರನೇ ಜಗತ್ತಿನ ದೇಶಗಳ ಜನತೆಗೆ, ಶಾಂತಿಗಾಗಿ ನಿರಂತರ ಹೋರಾಟದಲ್ಲಿ ತೊಡಗಿರುವ ಶಾಂತಿ ಶಕ್ತಿಗಳಿಗೆ ಸಿ.ಐ.ಟಿ.ಯು. ಮೇ ದಿನದ ಹಾರ್ದಿಕ ಶುಭಾಶಯ ಕೋರಿದೆ.

ಆದರೂ ಯುದ್ಧ ಮತ್ತು ಆಕ್ರಮಣದ ಅಪಾಯ ನಿರ್ಮೂಲನಗೊಂಡಿಲ್ಲ. ಸೋವಿಯತ್ ಒಕ್ಕೂಟದ ಮೇಲೆ ಪರಮಾಣು ಹೆಚ್ಚುಗಾರಿಕೆ ಪಡೆಯುವ, ವಿಶ್ವ ಪ್ರಾಬಲ್ಯ ಸ್ಥಾಪಿಸುವ ತನ್ನ ಆಸೆಯನ್ನು ಅಮೆರಿಕಾ ಬಿಟ್ಟಿಲ್ಲ. ಮಾತುಕತೆಗಳು, ಒಪ್ಪಂದಗಳು ಅವರ ಮಟ್ಟಿಗೆ ವಿಶ್ವ ಪ್ರಾಬಲ್ಯ ಸಾಧಿಸುವ ಹಾದಿಯಲ್ಲಿ ಅಲ್ಪಕಾಲದಲ್ಲಿ ತಂಗುದಾಣಗಳಷ್ಟೆ ಎಂದಿರುವ ಸಿ.ಐ.ಟಿ.ಯು. ಪ್ರಣಾಳಿಕೆ ಭಾರತದ ಕಾರ್ಮಿಕರು ಸಾಮ್ರಾಜ್ಯಶಾಹೀ ಶಕ್ತಿಗಳ ಆಕ್ರಮಣಗಳ ಅಪಾಯವನ್ನು ಮನಗಂಡು ಅದರ ಪಿತೂರಿಗಳ ವಿರುದ್ಧ ದೃಢ ನಿಲುವನ್ನು ಮುಂದುವರಿಸಬೇಕೆಂದು ವಿಶ್ವದ ಸಾಮ್ರಾಜ್ಯಶಾಹಿ-ವಿರೋಧಿ, ಶಾಂತಿ ಮತ್ತು ಸ್ವಾತಂತ್ರ್ಯದ ಶಕ್ತಿಗಳನ್ನು ಬಲಪಡಿಸುವ ಅಲಿಪ್ತ ಆಂದೋಲನಕ್ಕೆ, ಅಲಿಪ್ತ ನೀತಿಯ ನಮ್ಮ ದೇಶದ ವಿದೇಶಾಂಗ ನಿಲುವಿಗೆ ಪೂರ್ಣ ಬೆಂಬಲ ನೀಡಬೇಕೆಂದು ಕರೆ ನೀಡಿದೆ.

ನೆರೆಯ ದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶ್, ಶ್ರೀಲಂಕಾ ಮತ್ತು ನೇಪಾಳದ ಕಾರ್ಮಿಕ ವರ್ಗ ಹಾಗೂ ಜನತೆಗೆ ಮೇ ದಿನದ ಶುಭಾಶಯವನ್ನು ಸಿ.ಐ.ಟಿ.ಯು. ಪ್ರಣಾಳಿಕೆ ಕಳುಹಿಸಿದೆ. ಪಾಕಿಸ್ತಾನದ ಜನತೆ ಮಿಲಿಟರಿ ಆಳ್ವಿಕೆಯನ್ನು ಸೋಲಿಸಿ ಚುನಾಯಿತ ಸರ್ಕಾರ ಸ್ಥಾಪಿಸುವಲ್ಲಿ ಯಶಸ್ವಿಯಾಗಿದೆ. ಇದರಿಂದ ನಮ್ಮೆರಡು ದೇಶಗಳ ನಡುವೆ ಕಿತ್ತಾಟ ಹುಟ್ಟಿಸಿ ಈ ಉಪಖಂಡದ ಮೇಲೆ ನಾಲ್ಕು ಪ್ರಾಬಲ್ಯ ಸಾಧಿಸುವ ಅಮೆರಿಕನ್ ಆಟ ಸಾಗದಂತಾಗುತ್ತದೆ ಎಂದೂ ಪಾಕಿಸ್ತಾನದ ಕಾರ್ಮಿಕ ವರ್ಗ ಹೊಸ ಹಕ್ಕುಗಳನ್ನು ಗೆದ್ದುಕೊಳ್ಳಲು ಸಾಧ್ಯವಾಗುತ್ತದೆಂದೂ ಪ್ರಣಾಳಿಕೆ ಆಶಿಸಿದೆ.

ಸಮರಶೀಲ ಹೋರಾಟಗಳಲ್ಲಿ ನಿರತರಾಗಿರುವ ರೈತರು ಹಾಗೂ ಕೃಷಿ ಕಾರ್ಮಿಕರಿಗೆ ಮೇ ದಿನದ ಶುಭಾಶಯ ಕೋರುತ್ತಾ .ಕಾರ್ಮಿಕರು ಮತ್ತು ರೈತರ ನಡುವೆ ಒಂದು ಬಲಶಾಲಿ ಸಖ್ಯತೆ ಬೆಳೆಯದೆ ಸದ್ಯದ ಸಾಮಾಜಿಕ ವ್ಯವಸ್ಥೆಯನ್ನು ಭಾರತೀಯ ಜನತೆಯ ಪರವಾಗಿ ಬದಲಿಸುವುದು ಸಾಧ್ಯವಿಲ್ಲವೆಂದು ಪ್ರಣಾಳಿಕೆ ಹೇಳಿದೆ.

ನಮ್ಮ ದೇಶದಲ್ಲಿ ಮಹಿಳಾ ಆಂದೋಲನದ ತ್ವರಿತ ಏರಿಕೆಯನ್ನು ನಮ್ಮ ಕಾರ್ಮಿಕ ಸಂಘಗಳು ಮಹಿಳಾ ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಗಮನ ಹರಿಸುವುದನ್ನು ಸ್ವಾಗತಿಸಿರುವ ಸಿ.ಐ.ಟಿ.ಯು. ಪ್ರಣಾಳಿಕೆ ಹಳೆಯ ಪಾಳೆಯಗಾರೀ ಕಂದಾಚಾರಗಳ ವಿರುದ್ಧ, ಎಲ್ಲಾ ವಲಯಗಳಲ್ಲಿ ಸಮಾನತೆಗಾಗಿ ಭಾರತೀಯ ಮಹಿಳೆಯರಲ್ಲಿ ಒಂದು ಶಕ್ತಿಶಾಲೀ ಜಾಗೃತಿ ಇತ್ತೀಚಿನ ವರ್ಷಗಳಲ್ಲಿ ಕಂಡು ಬಂದಿದೆ ಎಂದು ಹೇಳಿದೆ. ಇದು ಒಂದು ಪ್ರಮುಖ ಪ್ರಜಾಪ್ರಭುತ್ವ ಶಕ್ತಿಯಲ್ಲಿ ಒಂದು ಮಹಾನ್ ಜಾಗೃತಿಯ ಲಕ್ಷಣ ಎಂದು ಕಾರ್ಮಿಕ ವರ್ಗ ಪರಿಗಣಿಸುವುದಾಗಿ ಪ್ರಣಾಳಿಕೆ ಘೋಷಿಸಿದೆ.

(ಪ್ರಣಾಳಿಕೆ ಪುಟ 3 ಹಾಗೂ 4 ನೋಡಿ)

ಉಗ್ರ ಚಳುವಳಿಗೆ ದೊರೆತ ಜಯ

ಕರ್ನಾಟಕ ಪ್ರಾಂತ ರೈತ ಸಂಘ ಹಗರಿಬೊಮ್ಮನಹಳ್ಳಿ ಘಟಕ ತಾಲೋಕಿನ ರೈತರ ಜ್ವಲಂತ ಸಮಸ್ಯೆಯಾದ "ವಿದ್ಯುತ್ ಕಡಿತದ ವಿರುದ್ಧ ವಿವಿಧ ಹಂತದ ತೀವ್ರ ತರವಾದ ಚಳುವಳಿ ನಡೆಸಿದ ಫಲವಾಗಿ ಸರ್ಕಾರದೊಂದಿಗೆ ರೈತ ಪ್ರತಿನಿಧಿಗಳೊಂದಿಗೆ ನಡೆದ ಮಾತುಕತೆಯಲ್ಲಿ ಹಲವು ಬೇಡಿಕೆಗಳನ್ನು ಈಡೇರಿಸುವ ಆಶ್ವಾಸನೆ ಹೊರಬಿದ್ದಿದೆ.

ಮಾರ್ಚ್ 25 ರಂದು 5 00 ಜನರ ಮೆರವಣಿಗೆ ನಡೆಸಿ ಮಂಡಳಿ ಅಧಿಕಾರಿಗಳಿಗೆ ಮನವಿ ಅರ್ಪಿಸುವುದರೊಂದಿಗೆ ಪ್ರಾರಂಭವಾದ ಚಳುವಳಿ ತಾಲೋಕಿನ ಎಲ್ಲಾ ವಿದ್ಯುತ್ ಬಳಕೆದಾರರನ್ನು ಸಂಘಟಿಸುವತ್ತ ಮುಂದಾಗಿ "ರೈತರ ಕ್ರಿಯಾಸಮಿತಿ" ನೇತೃತ್ವದಲ್ಲಿ ಮಾರ್ಚ್ 27ರಂದು ನಡೆದ ರಸ್ತೆ ತಡೆ ಚಳುವಳಿಯಲ್ಲಿ ಸಾವಿರ ಜನ ಪಾಲ್ಗೊಂಡರು. ಸುಡುವ ಬಿಸಿಲು ಮಳೆಗೂ ಜಗ್ಗದೇ ರಸ್ತೆಯಲ್ಲಿ ಮಲಗಿದ ರೈತರ ಐಕ್ಯತೆಯನ್ನು ಕಂಡ ಪೊಲೀಸರು ಬಂಧಿಸಲು ಹೆದರಿದರು.

ತಹಶೀಲ್ದಾರ್ ಹಾಗೂ ಜಿಲ್ಲಾ ಪರಿಷತ್ ಅಧ್ಯಕ್ಷರೊಡನೆ ನಡೆಸಿದ ಮಾತುಕತೆಯೂ ವಿಫಲಗೊಂಡಿತು.

ಮಾರ್ಚ್ 28ರಂದು ಮತ್ತದೇ ರೈತರು ಆಣಿನೆರೆದರು. 30 ತಾಸುಗಳು ರಸ್ತೆತಡೆ ಚಳುವಳಿ ಮುಂದುವರಿಯಿತು. ಮಾರ್ಚ್ 30ರಂದು ವಿದ್ಯುತ್ ಸಚಿವ ಲಕ್ಷ್ಮೀನರಸಿಂಹಯ್ಯ ಹಾಗೂ ಜಿಲ್ಲೆಯ ಉಸ್ತುವಾರಿ ಸಚಿವ ಎಂ.ಪಿ.ಪ್ರಕಾಶ್‌ರವರೊಡನೆ ಮಾತುಕತೆ ನಡೆದು ಹಗರಿಬೊಮ್ಮನಹಳ್ಳಿಗೆ ಸಬ್‌ಸ್ಟೇಷನ್ ಮಂಜೂರು ಮಾಡುವುದಾಗಿ ಹಾಗೂ ಕೆ.ಇ.ಬಿ.ಯಲ್ಲಿನ ಭ್ರಷ್ಟಾಚಾರ ತಡೆಗಟ್ಟಿ, ಏತ ನೀರಾವರಿಗೆ ವಿದ್ಯುತ್ ಕಡಿತವಾಗದಂತೆ ದಾವಣಗೆರೆಯಲ್ಲಿ ಒಂದು ಟ್ರಾನ್ಸ್‌ಫಾರಂ ಸ್ಥಾಪಿಸಿ ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ ಹಾಗೂ ಹರಪನಹಳ್ಳಿ ರೈತರಿಗೆ ವಿದ್ಯುತ್ತನ್ನು 20 ದಿನದೊಳಗೆ ಒದಗಿಸುವ ಆಶ್ವಾಸನೆ ನೀಡಿದರು.

ಈ ಚಳುವಳಿ ಹಾಗೂ ಮಾತುಕತೆಯ ನಾಯಕತ್ವವನ್ನು ರೈತ ನಾಯಕರಾದ ಜಿಲ್ಲಾ ಸಹ ಕಾರ್ಯದರ್ಶಿ ಕಾ|| ವೀರಸಂಗಯ್ಯ, ತಾಲೋಕು ಕಾರ್ಯದರ್ಶಿ ಕಾ|| ಬಿ.ಸುರೇಂದ್ರ, ಹೋರಾಟ ಸಮಿತಿ ಸದಸ್ಯರಾದ ಕಾ|| ವೆಂಕಣ್ಣ ಆಚಾರ್ಯ, ಗಿರಿರಾಜ್, ಹಂಪಾಪಾಪಣ್ಣ, ರಾಮಪ್ಪ ಪಿ.ಹೆಗ್ಗಾಳು, ಜಗದೇವಯ್ಯರವರುಗಳು ವಹಿಸಿದ್ದರು.

ಶಹಾಪುರ

ತಾಲೋಕು ಕೃಷಿ ಕೂಲಿಗಾರರ ಸಂಘದ ಆಶ್ರಯದಲ್ಲಿ ರಾಷ್ಟ್ರವ್ಯಾಪಿ ಚಳುವಳಿಯ ಅಂಗವಾಗಿ ಇಲ್ಲಿನ ತಾಲೋಕು ಕಛೇರಿ ಎದುರು ನೂರಾರು ರೈತರು ಧರಣಿ ಸತ್ಯಾಗ್ರಹ ನಡೆಸಿ ಕೃಷಿ ಕೂಲಿಗಾರರ 5 ಪ್ರಮುಖ ಬೇಡಿಕೆಯ ಮನವಿಯನ್ನು ಅರ್ಪಿಸಲಾಯಿತು. ಕೃಷಿ ಕೂಲಿಗಾರರಿಗೆ ಕೇಂದ್ರ ಶಾಸನ, ಹತ್ತಾರು ವರ್ಷಗಳಿಂದ ಸರ್ಕಾರಿ ಜಮೀನು ಸಾಗುವಳಿ ಮಾಡಿರುವ ರೈತರಿಗೆ ಪಟ್ಟಾ ನೀಡಬೇಕು, ಹಸಿರು ಕಾರ್ಡ್ ಒದಗಿಸಿ ಅಗತ್ಯ ಪ್ರಮಾಣದಲ್ಲಿ ಆಹಾರ ಧಾನ್ಯ ನೀಡಬೇಕು, ಕನಿಷ್ಠ ಕೂಲಿ ನೀಡಬೇಕು, ಹರಿಜನ-ಗಿರಿಜನರ ಮೇಲಿನ ದಬ್ಬಾಳಿಕೆ ನಿಲ್ಲಬೇಕೆಂಬ ಬೇಡಿಕೆಗಳಿಗಾಗಿ ನಡೆದ ಈ ಧರಣಿಯ ನಂತರ ನಡೆದ ಸಭೆಯಲ್ಲಿ ತಾಲೋಕ್ ಕಾರ್ಯದರ್ಶಿ ಕಾ|| ಚನ್ನಪ್ಪ ಆನೆಗುಂದಿ ಮಾತನಾಡಿ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ನೀರಿಗಾಗಿ ಕಾಲ್ನಡೆ ಜಾಥ-ಪಿಕೆಟಿಂಗ್

ಕೃಷ್ಣಾಮೇಲ್ದಂಡೆ ಪ್ರದೇಶದ ರೈತರಿಗೆ ಏಪ್ರಿಲ್ 20ರವರೆವಿಗೆ ಕಾಲುವೆ ಮೂಲಕ ನೀರು ಒದಗಿಸಲು ಸರ್ಕಾರದ ಆಶ್ವಾಸನೆಯಂತೆ 5 ವರ್ಷ ನೀರು ಒದಗಿಸಿ ಜಮೀನು ಸಮತಳ ಮಾಡಲು ಸಾಲ ಮಂಜೂರಾತಿ, ನೀರಾವರಿ ಸಲಹಾ ಸಮಿತಿ ರಚಿಸಿ ರೈತ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ನೀಡುವಂತೆ ಒತ್ತಾಯಿಸಿ ಗುಲ್ಬರ್ಗಾ ಜಿಲ್ಲೆಯ ಶಹಾಪುರ ಮತ್ತು ಸುರಪುರದ ರೈತರು ಹೋರಾಟ ನಡೆಸಲಾಯಿತು.

ಮಾರ್ಚ್ 27ರಂದು ಕಾಡಾ ಅಧಿಕಾರಿಗಳು ಹಾಗೂ ಎಲ್.ಡಿ.ಓ. ಮುಖ್ಯ ವಿಜ್ಞಾನಿ, ಇ.ಸಿ.ಪಿ.ಸಿ.ಯವರು ಬೇಡಿಕೆ ಕುರಿತು ತೋರಿದ ನಿರ್ಲಕ್ಷ್ಯ ಪ್ರತಿಭಟಿಸಿ ರೈತ ಸಂಘ ಎರಡು ತಾಲೋಕ್‌ಗಳ 5 0 ಗ್ರಾಮಗಳಲ್ಲಿ ಕಾಲ್ನಡೆ ಜಾಥ ಸಂಘಟಿಸಿ ಪ್ರಚಾರ ಸಭೆಗಳನ್ನು ನಡೆಸಿದ ಬಳಿಕ ಏಪ್ರಿಲ್ 10ರಂದು ವನದುರ್ಗದ ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಮುಂದೆ ಸಾವಿರಾರು ರೈತರು ನೆರೆದು ಪಿಕೆಟಿಂಗ್ ನಡೆಸಿ ಬಂದ್ ಮಾಡಿದರು. ಏಪ್ರಿಲ್ 20ರವರೆವಿಗೂ ನೀರು ಬಿಡುವ ಇತರ ಬೇಡಿಕೆ ಕುರಿತು ಆಶ್ವಾಸನೆ ನೀಡಿದ ಉಪ ಆಡಳಿತಾಧಿಕಾರಿ ಹಾಗೂ ಎಸ್.ಇ.ಯವರ ತಂತಿ ಸಂದೇಶದ ನಂತರ ಹೋರಾಟ ಹಿಂತೆಗೆದುಕೊಳ್ಳಲಾಯಿತು. ಜಾಥ ನಾಯಕತ್ವವನ್ನು ತಾಲೋಕು ಅಧ್ಯಕ್ಷ ಕೇಶವರಾಜರಾಜರ, ತಿಮ್ಮಪ್ಪನಾಯ್ಕ, ಜಹಾಗೀರ್‌ದಾರ್ ಚನ್ನಪ್ಪ ಆನೆಗುಂದಿಯವರು ವಹಿಸಿದ್ದರು.

ಎಸ್.ಕೆ.ಪ್ರೆಸ್ ಕಾರ್ಮಿಕರ ಸಂಘದ 52ನೇ ವಾರ್ಷಿಕ ಮಹಾಸಭೆ

ಏಪ್ರಿಲ್ 20ರಂದು ಸಂಘದ ಉಪಾಧ್ಯಕ್ಷ ಕಾ|| ಕೆ.ಮೂಸಬ್ಬರವರ ಅಧ್ಯಕ್ಷತೆಯಲ್ಲಿ ಎಸ್.ಕೆ.ಪ್ರೆಸ್ ವರ್ಕರ್ಸ್ ಯೂನಿಯನ್ 5 2ನೇ ವಾರ್ಷಿಕ ಮಹಾಸಭೆ ಜರುಗಿತು.

ಕಾರ್ಯದರ್ಶಿ ಬಿ.ಉಮಾನಾಥ ಖಜಾಂಚಿ, ಕೆ.ಜನಾರ್ಧನರವರು ಮಂಡಿಸಿದ ವರದಿ ಚರ್ಚಿಸಿ ಅಂಗೀಕರಿಸಲಾಯಿತು.

ಕಂಪ್ಯೂಟರೀಕರಣ, ಗಣಕೀಕರಣ ಉದ್ಯೋಗದ ಸಮಸ್ಯೆಯನ್ನು ಉಲ್ಬಣಗೊಳಿಸಿದೆ. ಅದರಲ್ಲೂ ಮುಖ್ಯವಾಗಿ ಮುದ್ರಣ ಕೈಗಾರಿಕೆಯ ಕಾರ್ಮಿಕರು ತಲೆ ಎತ್ತದಂತೆ ಸಂಪೂರ್ಣವಾಗಿ ನಾಮಶೇಷವಾಗುವಂತೆ ಮಾಡಲಾಗಿದೆ ಎಂದು ಕಂಪ್ಯೂಟರೀಕರಣ ಕುರಿತು ಕೈಗೊಂಡ ನಿರ್ಣಯದಲ್ಲಿ ಹೇಳಲಾಗಿದೆ. ಕೇಂದ್ರ ಸರ್ಕಾರ ತನ್ನ ಎಲ್ಲಾ ಕ್ಷೇತ್ರಗಳಲ್ಲೂ ಕೈಗೊಂಡಿರುವ ಇಂತಹ ಕ್ರಮದಿಂದ ಇಂದು ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗುವಂತೆ ಮಾಡಿ ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆಯುತ್ತಿದೆ ಎಂದು ನಿರ್ಣಯ ಹೇಳಿದೆ. ಅಸಂಘಟಿತ ಕಾರ್ಮಿಕರು ಸಂಘಟಿತರಾಗಿ ಕಾರ್ಯಾಚರಣೆ ಮೂಲಕ ಕಂಪ್ಯೂಟರೀಕರಣವನ್ನು ಎದುರಿಸಬೇಕೆಂದು ಕರೆ ನೀಡಲಾಗಿದೆ. ಹೋಟೆಲ್ ತಿಂಡಿ ದರ ಏರಿಕೆ ವಿರುದ್ಧ ಮತ್ತೊಂದು ನಿರ್ಣಯ ಸ್ವೀಕರಿಸಿ ಆರೋಗ್ಯ ಶುಚಿತ್ವ ಹಾಗೂ ಗುಣಮಟ್ಟ ಕಾಯ್ದುಕೊಳ್ಳದೆ ಬೆಲೆ ಏರಿಸುವ ಒಂದೇ ನೀತಿಯನ್ನು ಅನುಸರಿಸುತ್ತಿರುವ ಮಾಲೀಕರ ವಿರುದ್ಧ ಆರೋಗ್ಯ ಇಲಾಖೆ ಹಾಗೂ ಸರ್ಕಾರ ತೀವ್ರ ರೀತಿಯ ಕ್ರಮ ಕೈಗೊಂಡು ಬೆಲೆ ಇಳಿಸಬೇಕೆಂದು ಒತ್ತಾಯಿಸಲಾಗಿದೆ.

ಬೀಡಿ ಯೂನಿಯನ್‌ನ ಕಾ|| ಬಾಲಕೃಷ್ಣಶೆಟ್ಟಿ, ಶೀನಪ್ಪ, ವಿಶ್ವನಾಥ ಮುಂತಾದವರು ಶುಭ ಕೋರಿ ಮಾತನಾಡಿದರು.

ನೂತನ ಸಮಿತಿಗೆ ಕಾ|| ಕೆ.ಮೂಸಬ್ಬ (ಅಧ್ಯಕ್ಷ), ಕಾ|| ಯು.ಪಿ.ಡಿ'ಸೋಜ, ಕೆ.ನಾರಾಯಣಶೆಟ್ಟಿ (ಉಪಾಧ್ಯಕ್ಷರು), ಬಿ. ಉಮಾನಾಥ (ಪ್ರ.ಕಾರ್ಯದರ್ಶಿ) ಕೆ.ಸದಾಶಿವಶೆಟ್ಟಿ, ಕೆ.ಮಂಜುನಾಥ, ವಸಂತ ಕೆ. (ಜೊತೆಕಾರ್ಯದರ್ಶಿಗಳು) ಕೆ.ಜನಾರ್ಧನ ಕೋಶಾಧಿಕಾರಿಯಾಗುಳ್ಳ 26 ಜನರ ಕಾರ್ಯಕಾರಿ ಸಮಿತಿ ಆರಿಸಲಾಯಿತು.

ಆಯುಕ್ತರ ಮೇಲೆ ಸಚಿವರ ಹಲ್ಲೆ ಖಂಡನೆ

ಕರ್ನಾಟಕ ರಾಜ್ಯ ಸಚಿವ ವಿಶ್ವನಾಥ ರೆಡ್ಡಿ ಮುದ್ನಾಳ್ ಇತ್ತೀಚೆಗೆ ಯಾದಗಿರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇಲ್ಲಿಯ ಸಹಾಯಕ ಆಯುಕ್ತರಾದ ಶ್ರೀ ಕೆ.ಶಿವರಾಮುರವರ ಮೇಲೆ ನಡೆಸಿದ ಹಲ್ಲೆಯನ್ನು ಎಸ್.ಎಫ್.ಐ. ಜಿಲ್ಲಾ ಸಹಕಾರ್ಯದರ್ಶಿ ಕಾ|| ಸೈಯದ್ ಇಬ್ರಾಹಿಂ ಜಮಾದಾರ ಖಂಡಿಸಿದ್ದಾರೆ. ಸಚಿವರ ಸಮ್ಮುಖದಲ್ಲೇ ನಡೆದ ಹಲ್ಲೆ ಹಿಂದೆ ರಾಜಕೀಯ ಕೈವಾಡವಿದ್ದು ದಲಿತರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳಿಗೆ ಇದೊಂದು ನಿದರ್ಶನವೆಂದು ಅವರು ಹೇಳಿದ್ದಾರೆ.

ಮಂಗಳೂರು ವಿ.ವಿ. ಅವ್ಯವಹಾರ ತನಿಖೆಗೆ ಒತ್ತಾಯ

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅವ್ಯಾಹತವಾಗಿ ನಡೆಯುತ್ತಾ ಬಂದಿರುವ ಅವ್ಯವಹಾರ, ಸ್ವಜನ ಪಕ್ಷಪಾತ, ವ್ಯಾಪಕ ಭ್ರಷ್ಟಾಚಾರ ಮುಂತಾದ ಹಗರಣಗಳ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರವಾಗಲೀ ಹಾಗೂ ಮುಖ್ಯವಾಗಿ ಕುಲಾಧಿಪತಿಗಳು (ಛಾನ್ಸಲರ್) ಯಾವುದೇ ಕ್ರಮಗಳನ್ನು ಕೈಗೊಳ್ಳದಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸುತ್ತದೆ. ಈ ವಿದ್ಯಮಾನಗಳ ಬಗ್ಗೆ ವಿದ್ಯಾರ್ಥಿ, ಅಧ್ಯಾಪಕ ಸಮುದಾಯ, ಸಿಂಡಿಕೇಟ್, ಸೆನೆಟ್ ಸದಸ್ಯರು, ವಿಚಾರವಂತರು ನಿರಂತರ ಹೋರಾಟ ನಡೆಸುತ್ತಾ ಬಂದಿದ್ದರೂ ನಿರ್ಲಕ್ಷ್ಯತನ ತೋರುತ್ತಾ ಬಂದಿರುವುದು ಆರೋಪಿತರೊಂದಿಗೆ ಶಾಮೀಲಾಗಿರುವ ಅನುಮಾನ ಹುಟ್ಟಿಸುತ್ತದೆ.

ಕುಲಾಧಿಪತಿಗಳು ಮತ್ತು ರಾಜ್ಯ ಸರ್ಕಾರ ಈ ಎಲ್ಲಾ ವಿದ್ಯಮಾನಗಳನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡು ತುರ್ತಾಗಿ ತನಿಖೆಗೆ ಆದೇಶಿಸಬೇಕೆಂದು (ವಿ.ವಿ. ನಿಯಮದಂತೆ ಹಾಲಿ/ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ಮೂಲಕ ಇತರೆ) ಎಸ್.ಎಫ್.ಐ. ಆಗ್ರಹಪಡಿಸಿದೆ.

ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ವಿ.ವಿ.ವ್ಯಾಪ್ತಿಯಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಬಲ ಚಳುವಳಿ ನಡೆಸಲಾಗುವುದೆಂದು ರಾಜ್ಯ ಕಾರ್ಯದರ್ಶಿ ಕಾ|| ಎಸ್.ವೈ.ಗುರುಶಾಂತ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿವಿಧೆಡೆ ಭಗತ್‌ಸಿಂಗ್ ದಿನಾಚರಣೆ

ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ.ಗಳ ಆಶ್ರಯದಲ್ಲಿ ಮಾರ್ಚ್ 23ರಂದು ಯಲಬುರ್ಗಾದಲ್ಲಿ ಭಗತ್‌ಸಿಂಗ್ ದಿನಾಚರಣೆಯನ್ನು ಆಚರಿಸಲಾಯಿತು. ಇಟಗಿಯ ಮಹೇಶ್ವರ ಕಾಲೇಜು ಉಪನ್ಯಾಸಕ ವೀರಭದ್ರಗೌಡ ಪಾಟೀಲರವರು ಮುಖ್ಯ ಅತಿಥಿಗಳಾಗಿ ಹಾಗೂ ಪ್ರಾಂತ ರೈತ ಸಂಘದ ಅಧ್ಯಕ್ಷ ಶಿವನಗೌಡರವರು ಅತಿಥಿಗಳಾಗಿ ಭಾಗವಹಿಸಿ ಭಗತ್‌ಸಿಂಗ್‌ರ ಕ್ರಾಂತಿಕಾರಿ ಜೀವನದ ಕುರಿತು ಮಾತನಾಡಿದರು. ಮತ್ತೊಬ್ಬ ರೈತ ನಾಯಕ ಪ್ರಭುರಾಜ ಕುಡಗುಂಟಿ ಎಸ್.ಎಫ್.ಐ. ಉಪಾಧ್ಯಕ್ಷ ಪ್ರಭುಗೌಡ ಪಾಟೀಲರವರು ಮಾತನಾಡಿದರು. ಡಿ.ವೈ.ಎಫ್.ಐ. ಅಧ್ಯಕ್ಷ ಶರಣಪ್ಪ ಹುಬ್ಬಳಿ ಮೊದಲಿಗೆ ಧ್ವಜಾರೋಹಣ ಮಾಡಿದರು. ಲಲಿತ ಮುರಡಿ ಸ್ವಾಗತಿಸಿ ಶರಣಪ್ಪ ಅರಕೇರಿ ವಂದಿಸಿದರು.

ತುಮಕೂರು

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ನಿರಾಶವಾದದಿಂದ ಬೇಸತ್ತಿದ್ದ ಸಂದರ್ಭದಲ್ಲಿ ಭಗತ್‌ಸಿಂಗ್ ಕ್ರಾಂತಿಕಾರ ಶಕ್ತಿಗಳಿಗೆ ಸ್ಫೂರ್ತಿದಾಯಕವಾಗಿದ್ದರು ಎಂದು ಕಾ|| ಕೆ.ಆರ್.ನಾಯಕ್‌ರವರು ಹೇಳಿದರು. ಅವರು ಎಸ್.ಎಫ್.ಐ., ಡಿ.ವೈ.ಎಫ್.ಐ. ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಭಗತ್‌ಸಿಂಗ್ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಉಪನ್ಯಾಸಕ ಸಿ.ಯತಿರಾಜ್‌ರವರು ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಭಗತ್‌ಸಿಂಗ್ ಹಾಗೂ ಸಂಗಾತಿಗಳು ಇದ್ದರೆ ವಾತಾವರಣವೇ ಬದಲಾಗುತ್ತಿತ್ತೆಂದು ಹೇಳಿ ಇಂದು ಸಹ ಸಾಮ್ರಾಜ್ಯಶಾಹಿ ಶಕ್ತಿಗಳ ಪಿತೂರಿಯ ವಿರುದ್ಧ ಯುವಜನರು ಎಚ್ಚರ ವಹಿಸಬೇಕೆಂದು ಕರೆ ನೀಡಿದರು.

ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಕಾ|| ಈ.ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಸಿದ್ದಲಿಂಗಣ್ಣ ಸ್ವಾಗತಿಸಿ ಕಾ|| ಬಿ.ಉಮೇಶ ವಂದಿಸಿದರು.

ಬೀದರ್

ಬೀದರ್ ಸಮುದಾಯ ನಾಟಕ ತಂಡವು ವಾಲದೊಡ್ಡಿ ಗ್ರಾಮದಲ್ಲಿ ಮಾರ್ಚ್ 23ರಂದು ಭಗತ್‌ಸಿಂಗ್ ದಿನಾಚರಣೆ ಅಂಗವಾಗಿ ಬೀದಿನಾಟಕ ಹಾಗೂ ಜನಪರ ಹಾಡುಗಳ ಕಾರ್ಯಕ್ರಮ ನೀಡಿತು.

ಸುತ್ತಲ ಗ್ರಾಮಗಳಿಂದ ಜನರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು. ಭಗತ್‌ಸಿಂಗ್ ಹಾಗೂ ಆತನ ಸಂಗಾತಿಗಳಾದ ರಾಜಗುರು ಸುಖದೇವ್ ಮುಂತಾದವರು ದೇಶದ ಸಮಗ್ರತೆ ಐಕ್ಯತೆಗಾಗಿ ಹೋರಾಡಿದ ಕ್ರಾಂತಿಕಾರಿ ಪರಂಪರೆ ಕುರಿತು ತಿಳಿಸಿ ಇತ್ತೀಚೆಗೆ ಕೊಲೆಗೈಯ್ಯಲ್ಪಟ್ಟ ಜನನಾಟ್ಯಮಂಚ್‌ನ ಪ್ರಸಿದ್ಧ ಕಲಾವಿದ ಸಫ್ದರ್‌ಹಾಶ್ಮಿಯವರ ಕುರಿತು ನಾಟಕದ ಸಂದರ್ಭದಲ್ಲಿ ಜನರಿಗೆ ವಿವರಿಸಲಾಯಿತು.

ಮಂಡಲಪಂಚಾಯ್ತಿ ನೌಕರರ ಸಭೆ

ಮಂಡಲಪಂಚಾಯ್ತಿ ನೌಕರರ ಸಂಘದ ಹೂವಿನ ಹಡಗಲಿ ಘಟಕದ ಸಭೆ ಏಪ್ರಿಲ್ 14ರಂದು ಜರುಗಿತು. ಈ ಸಭೆಯಲ್ಲಿ ನೌಕರರ ಸಮಸ್ಯೆಗಳ ಕುರಿತು ಹಾಗೂ ಸಂಘಟನೆ ಕುರಿತು ಚರ್ಚಿಸಲಾಯಿತು. ನೂತನ ತಾಲೋಕು ಸಮಿತಿಗೆ ಕಾ|| ಎಸ್.ಎಂ.ಚಂದ್ರಯ್ಯ (ಅಧ್ಯಕ್ಷ), ಹನುಮಂತಪ್ಪ (ಉಪಾಧ್ಯಕ್ಷ), ಎ. ಕೊಟ್ರೇಶ್ (ಕಾರ್ಯದರ್ಶಿ), ಲಿಂಗರಾವ್ (ಖಜಾಂಚಿ) ಸಂಘಟನಾ ಕಾರ್ಯದರ್ಶಿಯಾಗಿ ಕಾ|| ವಿರೂಪಾಕ್ಷಗೌಡ ಹಾಗೂ 10 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಸಣ್ಣ ವ್ಯಾಪಾರಿಗಳ ಸಂಘ

ಸಿಂಧನೂರು ನಗರದಲ್ಲಿ ಹಣ್ಣಿನ ವ್ಯಾಪಾರ ಮಾಡುವ, ಹೋಟೆಲ್, ಸಣ್ಣ ವ್ಯಾಪಾರಸ್ಥರು ಮಾರ್ಚ್ 18ರಂದು ಸಭೆ ಸೇರಿ ಸಂಘ ರಚಿಸಲಾಯಿತು. 25 0 ಜನರು ಪಾಲ್ಗೊಂಡಿದ್ದ ಈ ಸಭೆಯಲ್ಲಿ ವಿದ್ಯಾರ್ಥಿ ಯುವಜನ ಸಂಘಟನೆಗಳ ಮುಖಂಡರಾದ ಕಾ|| ಶೇಕ್ಷಾಖಾದ್ರಿ, ಶರಬಣ್ಣ ನಾಗಲಾಪುರ, ನಾರಾಯಣ ಕಿಲ್ಲೇದ, ಟೈಲರ್ ಯೂನಿಯನ್‌ನ ಅಲಸಾಬ ಕೃಷಿ ಕೂಲಿಗಾರ ಸಂಘದ ಸಂಚಾಲಕ ನಬಿಸಾಬ ಮಾತನಾಡಿದರು.

ಇತ್ತೀಚೆಗೆ ಪುರಸಭೆ ಏರಿಸಿದ ತೆರಿಗೆಯನ್ನು ಖಂಡಿಸಿ ಚಳುವಳಿ ರೂಪಿಸಲು ನಿರ್ಧರಿಸಲಾಯಿತು.

ನೂತನ ಸಂಘಕ್ಕೆ ಮುಷ್ಠದ್ (ಅಧ್ಯಕ್ಷ) ಅಮರಯ್ಯ (ಉಪಾಧ್ಯಕ್ಷ) ಸುಭಾನ (ಕಾರ್ಯದರ್ಶಿ) ಬಾಬು (ಸಹಕಾರ್ಯದರ್ಶಿ) ವೀರಭದ್ರಸ್ವಾಮಿ (ಖಜಾಂಚಿ)ಯಾಗಿ ಆಯ್ಕೆಗೊಂಡರು.

ತೆರಿಗೆ ಏರಿಕೆ ವಿರುದ್ಧ ಪ್ರದರ್ಶನ

ಮಂಡಲಪಂಚಾಯ್ತಿ ವ್ಯವಸ್ಥೆಯನ್ನು ಜನಪರಗೊಳಿಸಿ ಹೆಚ್ಚು ಜನೋಪಯೋಗಿ ಕಾರ್ಯಗಳನ್ನು ಕೈಗೊಳ್ಳದೆ ವಿಪರೀತ ಮನೆ ತೆರಿಗೆಗಳನ್ನು ಏರಿಸಿ ಮಂಡಲ ಪಂಚಾಯ್ತಿಯಲ್ಲಿ ವಿಶ್ವಾಸ ಕಡಿಮೆಗೊಳಿಸುವಂತೆ ದ.ಕ. ಜಿಲ್ಲೆಯ ಕುಪ್ಪೆಪದವಿನ ಮಳಲಿ ಮಂಡಲಪಂಚಾಯ್ತಿ ಮಾಡುತ್ತಿದೆ.

ಮಾರ್ಚ್ 27ರಂದು ಪಕ್ಷದ ಕುಪ್ಪೆಪದವು ಶಾಖೆ ಈ ತೆರಿಗೆ ಏರಿಕೆ ವಿರುದ್ಧ ಮಂಡಲ ಪಂಚಾಯ್ತಿ ಕಛೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿ ಬಹಿರಂಗ ಸಭೆ ನಡೆಸಿತು. ಈ ಸಭೆಯನ್ನುದ್ದೇಶಿಸಿ ಪಕ್ಷದ ಗುರುಪುರ ಪ್ರದೇಶ ಕಾರ್ಯದರ್ಶಿ ಕಾ|| ಯು.ಬಿ. ಲೋಕಯ್ಯ ರೈತ ನಾಯಕ ಕಾ|| ನೀಲಯ್ಯನಾಯ್ಕ ವಾಸುದೇವ ಆಚಾರಿ ಮುಂತಾದವರು ಮಾತನಾಡಿದರು. ಕಾ|| ಹೊನ್ನಯ್ಯ ಸ್ವಾಗತಿಸಿ ಕಾ|| ಸದಾಶಿವದಾಸ್ ವಂದಿಸಿದರು.

ಐಕ್ಯರಂಗಕ್ಕೆ ಚಂದಾದಾರರಾಗಿ

ವಾರ್ಷಿಕ ಚಂದಾ ರೂ. 50

ಅರ್ಧವಾರ್ಷಿಕ ರೂ. 25

ಈ ವರ್ಷದ ಜುಲೈ ತಿಂಗಳಿಗೆ ನಿಕರಾಗುವ ಕ್ರಾಂತಿಗೆ ಹತ್ತುವರ್ಷ ತುಂಬುತ್ತದೆ. ಈ ಹತ್ತು ವರ್ಷಗಳು ನಿಕರಾಗುವಕ್ಕೆ ಸಂಕಟದ ವೀರ ಹೋರಾಟದ ದಶಕವಾಗಿತ್ತು. ಅಮೆರಿಕನ್ ಸಾಮ್ರಾಜ್ಯಶಾಹಿ ಕ್ರಾಂತಿಯನ್ನು ಹೊಸಕಿ ಹಾಕಲು ಶತ ಪ್ರಯತ್ನ ನಡೆಸಿತ್ತು. ಈ ಒತ್ತಡ ಹೇರುತ್ತಿತ್ತು. ಈ ಸಭೆಯನ್ನು ಹಲವಾರು ಬಾರಿ ಮುಂದೆ ಹಾಕುವುದರಲ್ಲಿ ಕಾಣದ ಕೈ ಅಮೆರಿಕದ್ದೇ ಆಗಿತ್ತು. ಕೊನೆಗೂ 1989 ಫೆಬ್ರವರಿ 13-14ರಂದು ಈ ಸಭೆ ನಡೆಯಿತು. ಈ ನಡುವೆ ನಿಕರಾಗುವ 'ಕಾಂಟ್ರಾ'ಗಳನ್ನು ದೇಶದ ಗಡಿಗಳಿಂದ ಹೊರಗಟ್ಟುವುದರಲ್ಲಿ ಯಶ

ನಿನ್ನೆ ಕ್ಯೂಬಾ

ಹೋರಾಟದಲ್ಲಿ ನಿಕರಾಗುವಕ್ಕೆ ಆದ ನಷ್ಟ 17 ಶತಕೋಟಿ ಡಾಲರುಗಳು. ನಿಕರಾಗುವದ ಪ್ರತಿ-ಕ್ರಾಂತಿ ಕಾಂಟ್ರಾ ಸಾಕು ನಾಯಿಗಳನ್ನು ಸಾಕಲು ಇರಾನ್-ಕಾಂಟ್ರಾ ಹಗರಣಕ್ಕಿಳಿಯಲು ರೇಗನ್ ಹೇಸಲಿಲ್ಲ. ಕ್ಯೂಬನ್ ಕ್ರಾಂತಿಯ ನಂತರ ಪಶ್ಚಿಮ ಗೋಳಾರ್ಧದಲ್ಲಿ ನಿಕರಾಗುವ ಮೊದಲ ಕ್ರಾಂತಿ. ಇದನ್ನು ಹೊಸಕಿ ಹಾಕು ವುದು ಅಧ್ಯಕ್ಷ ರೇಗನ್ ಮತ್ತು ಅವರ ನಾಟೋ ಬಾಲಬಡುಕರ ವಿದೇಶಿ ನೀತಿಯ ಮುಖ್ಯ ಉದ್ದೇಶವಾಗಿತ್ತು. ಅದೇ ರೀತಿ, ನಿಕರಾಗುವ ಕ್ರಾಂತಿಯ ಸಹಾಯಕ್ಕೆ ಧಾವಿಸುವುದು 1980ರ ದಶಕದಲ್ಲಿ, ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ-ವಿರೋಧಿ ಸೌಹಾರ್ದತೆಯ ಪ್ರತೀಕ ವಾಗಿತ್ತು.

ಅಮೆರಿಕನ್ ಸಾಮ್ರಾಜ್ಯಶಾಹಿ ನಿಕರಾಗುವ ಮೇಲೆ ಹೆಚ್ಚು ಕಡಿಮೆ ಯುದ್ಧವನ್ನೇ ಸಾರಿದ್ದರೆ, ನಿಕರಾಗುವ ಶಾಂತಿ ಪ್ರಸ್ತಾಪಗಳ ಒತ್ತಡ ಮುಂದುವರಿಸುತ್ತಿದೆ. ಇದರ ಫಲವಾಗಿ ಈ ಪ್ರದೇಶದ ಅಮೆರಿಕನ್ ಬೆಂಬಲದ ಸರ್ಕಾರಗಳೂ ನಿಕರಾಗುವ ಜತೆ ಇಸ್‌ಕ್ವಿಪುಲಾಸ್-II (EQUIPUILAS) ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳುಗ್ವಾಟೆಮಾಲಾ, ಹೊಂಡುರಾಸ್, ಎಲ್‌ಸಾಲ್ವಡೋರ್, ಕೋಸ್ಟಾರಿಕಾ, ನಿಕರಾಗುವ. ಪ್ರತಿ ವರ್ಷ ಈ ಐದು ದೇಶಗಳ ಅಧ್ಯಕ್ಷರುಗಳು ಸೇರಬೇಕೆಂದು ನಿರ್ಧರಿಸಲಾಗಿತ್ತು. ಆದರೆ ಈ ಸಭೆ ನಡೆಯದಂತೆ ಅಮೆರಿಕ ಉಳಿದ ದೇಶಗಳ ಅಧ್ಯಕ್ಷರುಗಳ ಮೇಲೆ

ಸ್ವಿಯಾಗಿದ್ದರು. ಈ ಸಭೆಗೆ ಬರುವ ಮೊದಲು ಹೊಂಡೂರಸ್ ಕೊಸ್ಟಾರಿಕಾದ ವಿದೇಶ ಮಂತ್ರಿಗಳು ತಮ್ಮ ಅಮೆರಿಕನ್ ಧಣಿಗಳನ್ನು ಭೇಟಿ ಮಾಡಿ ಬಂದಿದ್ದರು. ಆದರೂ ಸಭೆಯ ತೀರ್ಮಾನಗಳು, ನಿಕರಾಗುವಕ್ಕೆ ಅನುಕೂಲವಾಗಿದ್ದವು. ಈ ಸಭೆಯ ತೀರ್ಮಾನಗಳು ನಿಕರಾಗುವ ಶಾಂತಿ ನೀತಿಯ ವಿಜಯ ಎನ್ನಬೇಕು.

ಕಾಂಟ್ರಾಗಳಿಗೆ ಗೇಟ್‌ಪಾಸ್

ಈ ಒಪ್ಪಂದದ ಪ್ರಕಾರ ಹೊಂಡೂರಸ್‌ನಲ್ಲಿ ಕ್ಯಾಂಪು ಹಾಕಿರುವ ಕಾಂಟ್ರಾಗಳನ್ನು ನಿಕರಾಗುವ ಅಥವಾ ಇತರ ದೇಶಗಳಿಗೆ ಸಾಗ ಹಾಕುವುದಕ್ಕೆ ಹೊಂಡೂರಸ್ ಒಪ್ಪಿಕೊಂಡಿದೆ. ಈ ಹಿಂದೆ ಹೊಂಡೂರಸ್‌ನಲ್ಲಿ ಕಾಂಟ್ರಾ ಕ್ಯಾಂಪುಗಳಿವೆ ಎಂಬುದನ್ನೇ ಅಲ್ಲಿನ ಸರ್ಕಾರ ಒಪ್ಪಿಕೊಂಡಿರಲಿಲ್ಲ. ಈಗ ಅಲ್ಲಿ ಐದುಸಾವಿರ ಕಾಂಟ್ರಾ ದಂಗೆಕೋರರು ಮತ್ತು ಅವರ ಕುಟುಂಬ ಸೇರಿದಂತೆ ಸುಮಾರು 5 0 ಸಾವಿರ ಜನರು ಹೊಂಡೂರಸ್‌ನಲ್ಲಿ ಕ್ಯಾಂಪುಗಳಲ್ಲಿದ್ದಾರೆಂದು ಒಂದು ಅಂದಾಜು. ಒಪ್ಪಂದ ಸಹಿ ಹಾಕಿ, ಮೂರು ತಿಂಗಳೊಳಗೆ ಕಾಂಟ್ರಾ ಕ್ಯಾಂಪುಗಳನ್ನು ಮುಚ್ಚಿ, ಅವರಿಗೆ ನಿಕರಾಗುವ ಅಥವಾ ಬೇರೆ ದೇಶಗಳಲ್ಲಿ ಪುನರ್ವಸತಿ ಕೊಡಬೇಕೆಂಬುದು ಒಪ್ಪಂದದ ಮುಖ್ಯ ಅಂಶ.

ಆದರೆ ನಿಕರಾಗುವದ ಈ ವಿಜಯವನ್ನು, ಪಾಶ್ಚಿಮಾತ್ಯ ಪತ್ರಿಕೆಗಳು ಕಡೆಗಣಿಸಲು ಪ್ರಯತ್ನಿಸಿವೆ. ಮಾತ್ರವಲ್ಲ-ನಿಕರಾಗುವದಲ್ಲಿ 1990 ಅಕ್ಟೋಬರ್‌ನಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳನ್ನು, ಇನ್ನೂ ಮೊದಲೇ ಫೆಬ್ರವರಿಯಲ್ಲೇ. ನಡೆಸಲು ನಿರ್ಧರಿಸಿದ್ದು ಪಾಶ್ಚಿಮಾತ್ಯ ದೇಶಗಳು ವಿಜಯ ಎಂದು ಪ್ರಚಾರ ನಡೆಸಲು ಆರಂಭಿಸಿವೆ. ಆಡಿಗೆ ಬಿದ್ದರೂ ಮೂಗು ಮೇಲೆ ಎಂಬಂತೆ! ಈ ಪತ್ರಿಕೆಗಳನ್ನು ನಂಬುವುದಾದರೆ-ನಿಕರಾಗುದಲ್ಲಿ "ಮುಕ್ತ ಮತ್ತು ನ್ಯಾಯಯುತ" ಚುನಾವಣೆಗಳನ್ನು ನಡೆಸಲು "ಒಪ್ಪಿಸಿದ್ದು" ಮತ್ತು ಈ ಮೂಲಕ ಆ ದೇಶದ "ಪ್ರಜಾಪ್ರಭುತ್ವೀಕರಣ" ಸಾಧಿಸಿರುವುದರ ಎದುರು ಕಾಂಟ್ರಾಗಳಿಗೆ ಗೇಟ್ ಪಾಸ್ ಕೊಡುವ ಒಪ್ಪಂದ ಬರಿಯ "ಚಿಕ್ಕ ರಿಯಾಯಿತಿ" ಅಂತೆ! ಆದರೆ ನಿಜಸಂಗತಿ ಎಂದರೆ FMLN (ಸ್ಯಾಂಡಿನಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗ)ನ ಸರ್ಕಾರದ ಜನ ಪ್ರಿಯತೆ, ನಿಕರಾಗುವ ಅತ್ಯಂತ ತೀವ್ರ ವಿರೋಧಿಗಳೂ ಅಲ್ಲಗಳೆಯಲಾಗದು. 1979ರಲ್ಲಿ, ನಿಕರಾ

ಇಂದು ನಿಕರಾಗುವಾ

ಗುವದಲ್ಲಿ ಸೋಮೋಝಾ ಸರ್ವಾಧಿಕಾರವನ್ನು ಕೊನೆಗೊಳಿಸಿದ ಕ್ರಾಂತಿಯ ನಂತರ, 1984 ರಲ್ಲಿ ಬಹುಪಕ್ಷೀಯ ಚುನಾವಣೆ ನಡೆಸಿ FMLN ಸರ್ಕಾರ ತನ್ನ ಜನಪ್ರಿಯತೆ ಮತ್ತು ಕಾನೂನುಬದ್ಧತೆಯನ್ನು ಸಿದ್ಧ ಪಡಿಸಿದೆ. 1990ರ ಅಕ್ಟೋಬರ್‌ನಲ್ಲಿ ಮುಂದಿನ ಚುನಾವಣೆಗಳು ನಡೆಯ ಬೇಕಾಗಿತ್ತು. ಸಾಮ್ರಾಜ್ಯಶಾಹಿ ಮತ್ತು ಅವರ ಲ್ಯಾಟಿನ್ ಅಮೆರಿಕನ್ ಬಾಲಬಡುಕರ ಅಪಪ್ರಚಾರವನ್ನು ಎದುರಿಸಲು, ಚುನಾವಣೆಯನ್ನು ಫೆಬ್ರವರಿಯಲ್ಲೇ ನಡೆಸಲು ನಿರ್ಧರಿಸಲಾಯಿತು. ಎಲ್ಲಾ ಪಕ್ಷಗಳಿಗೆ ಪ್ರಚಾರ ಮಾಧ್ಯಮಗಳಲ್ಲಿ ನ್ಯಾಯ ಪಾಲು ಕೊಡುವುದು, ಚುನಾವಣೆಗಳನ್ನು ವೀಕ್ಷಿಸಲು ಅಂತರಾಷ್ಟ್ರೀಯ ವೀಕ್ಷಕರಿಗೆ ಆಹ್ವಾನ-ಇವೆಲ್ಲಾ, ಪಾಶ್ಚಿಮಾತ್ಯ ಪ್ರಚಾರದ ಪೊಳ್ಳನ್ನು ಬಯಲುಪಡಿಸುವ ಉದ್ದೇಶದಿಂದ ಕೂಡಿದ ಕ್ರಮಗಳು. ಇವು ಕೆಲವು ಪುಟಗೋಸಿ ಕಾಂಟ್ರಾಗಳಿಗೆ 'ಗೇಟ್‌ಪಾಸ್' ಕೊಡಿಸಲು ಕೊಟ್ಟ ರಿಯಾಯಿತಿಗಳಲ್ಲ. ನಿಕರಾಗುವ ಸ್ಯಾಂಡಿನಿಸ್ಟಾ ಸರ್ಕಾರ ಇದೇ ಸಮಯದಲ್ಲಿ- 1822 ಮಾಜಿ ಸರ್ವಾಧಿಕಾರಿ ಸೋಮೊಝಾ ಬಂಟರನ್ನೂ, 15 32 ಕಾಂಟ್ರಾಗಳನ್ನು- ಜೈಲಿನಿಂದ ಬಿಡುಗಡೆ ಮಾಡಿ ತನ್ನ ಆತ್ಮವಿಶ್ವಾಸ ಪ್ರದರ್ಶಿಸಿದೆ.

ಅಮೆರಿಕನ್ ಆಸರೆಗೆ ಕೊಡಲಿ ಏಟು

ಮಧ್ಯ ಅಮೆರಿಕಾದ 5 ದೇಶಗಳ ಅಧ್ಯಕ್ಷರ ಈ ಸಭೆ ಎಲ್ಲಾ ಮಧ್ಯ ಅಮೆರಿಕಾದ ಜನರ ಆಶಯಗಳನ್ನು ಪ್ರತಿ ಬಿಂಬಿಸುತ್ತಾ ಯುರೋಪಿಯನ್ ಪಾರ್ಲಿಮೆಂಟ್ ಮಾದರಿಯಲ್ಲಿ ಎಲ್ಲಾ ದೇಶಗಳಿಂದ ಚುನಾಯಿತರಾದ ಪ್ರತಿನಿಧಿಗಳಿರುವ ಮಧ್ಯ ಅಮೆರಿಕನ್ ಪಾರ್ಲಿಮೆಂಟು ಅಸ್ತಿತ್ವಕ್ಕೆ ತರಬೇಕೆಂದು ನಿರ್ಧರಿಸಿದೆ. ಈ ನಿರ್ಧಾರ ಮಧ್ಯ ಅಮೆರಿಕದ ದೇಶಗಳ ಸಮಸ್ಯೆಯನ್ನು ಪ್ರತ್ಯೇಕಿಸಿ ಬಗೆಹರಿಸಲು ಸಾಧ್ಯವಿಲ್ಲ ಎಂಬ ಅನ್ನಿಸಿಕೆಯ ಪ್ರತಿಬಿಂಬ. ದುರ್ಭರ ಆರ್ಥಿಕ, ಪರಿಸ್ಥಿತಿ, ಸಾಲದ ಕೂಪಕ್ಕೆ ಸಿಕ್ಕಿ ಅಂತರಾಷ್ಟ್ರೀಯ ಸಹಾಯಕ್ಕೆ ವಿನಂತಿಸಿಕೊಂಡಿವೆ. ಅದರಲ್ಲೂ ಮುಖ್ಯವಾಗಿ ಯುರೋಪಿನ EECಕ್ಕೆ ಈ ಮನವಿ. ಅಮೆರಿಕದ ಆಸರೆಗಿಂತ ಆಚೆಗೆ ಗಮನಹರಿಸುವುದು ಅದೂ ದೇಶಗಳ ಸಂಘಟನೆ)ನ ತಟಸ್ಥ ವೀಕ್ಷಕರನ್ನು ನೇಮಿಸಿ ಅವರು ವರದಿಗಳನ್ನು ಸಲ್ಲಿಸಬೇಕೆಂದು ನಿಕರಾಗುವ ಪ್ರಸ್ತಾಪವಾಗಿತ್ತು. ಈ ಪ್ರಸ್ತಾಪವನ್ನು ಅಂಗೀಕರಿಸಲು ಅಮೆರಿಕದ "ಮಾನವ ಹಕ್ಕುಗಳ ಛಾಂಪಿಯನ್ನರು" ಮತ್ತು ಅವರ ಕೈಗೊಂಬೆಗಳು ಹಿಂದೇಟು ಹಾಕಿದವು. ಅದರ ಬದಲು "ಸ್ವ-ನಿರೀಕ್ಷಣೆ" ಸಾಕು ಎಂದವು.

ನಾಳೆ ಎಲ್‌ಸಾಲ್ವಡೋರ್

ಮಧ್ಯ ಅಮೆರಿಕದ ಎಲ್ಲಾ ದೇಶಗಳಲ್ಲಿ ಕ್ರಾಂತಿಕಾರಿ ಶಕ್ತಿಗಳು ತೀವ್ರ ಮುನ್ನಡೆ ಸಾಧಿಸಿವೆ. ಇದರಲ್ಲಿ ಅತ್ಯಂತ

ಕ್ಯೂಬನ್ ಕ್ರಾ
ಅಮೆರಿಕನ್, ಕ್ಯಾರಿಬಿ
ರಾಜಕೀಯ ನಿಜಸ್ಥಿತಿ.
ಪ್ರತಿರೋಧವನ್ನು ಒಂದ
ಈ ಕೆಳಗಿನ ಮೂರ
★ ಕ್ರಾಂತಿಕಾರಿ ಶಕ್ತಿಗ
★ ಪ್ರಜಾಪ್ರಭುತ್ವ
ಹಿಡಿದು ಪಾದ್ರಿಗಳವರೆ
ಹೋರಾಟಗಳಲ್ಲಿ ಸಾಮ
ಕೈಗೊಂಬೆ ಸರ್ಕಾರಗಳ
ವಿರೋಧಿ ಸತ್ವ.

ಅಮೆರಿಕನ್ ಆಸರೆಯಿಂದಾಗಿ ಅಧಿ... ದಲ್ಲಿರುವ ಅಧ್ಯಕ್ಷರು ಇದಕ್ಕೆ ಒಲ... ತೋರಿಸುತ್ತಿರುವುದು ಅತ್ಯಂತ ಗಮ... ರ್ಹವಾದುದು.

ಇಂತಹ ತೀರ್ಮಾನಗಳು ಬರ... ಈ ಸಭೆಯಲ್ಲಿ ನಿಕರಾಗುವ ಸಕ್ರಿ... ಮಧ್ಯಪ್ರವೇಶ ಕಾರಣ. ಹಾಗೂ ನಿಕರಾಗು... ಕ್ರಾಂತಿಯ ಮುನ್ನಡೆ. ಅದರ ಪ್ರಸ್ತಾ... ಗಳಿಗೆ ಇತರ ದೇಶಗಳ ಎಡ ಮ... ಪ್ರಜಾಸತ್ತಾತ್ಮಕ ಶಕ್ತಿಗಳ, ಸಾಮಾನ್ಯ ಜನ... ಬೆಂಬಲ ಇದರಿಂದ ಸರ್ಕಾರಗಳ ಮೇ... ಬೀಳುವ ಸಾರ್ವಜನಿಕ ಅಭಿಪ್ರಾಯ... ಒತ್ತಡ ಕಾರಣ. ತನಗೆ ಇಷ್ಟವಿಲ್ಲದ ಎ... ಒಲವಿನ, ಪ್ರಜಾಸತ್ತಾತ್ಮಕ ಸರ್ಕಾರಗಳ... "ಮಾನವ ಹಕ್ಕುಗಳ ನಾಶ"ದ ಆಪಾದ... ಹಣೆಗಂಟಿಸುವುದು ಅಮೆರಿ... ಮಾಮೂಲಿ ಕುತಂತ್ರ. ಈ ಸಭೆಯ... ನಿಕರಾಗುವ ಒಂದು ಪ್ರಸ್ತಾಪದ ಮೂ... ಅಮೆರಿಕದ ಈ ತಂತ್ರವನ್ನು ಅದ... ವಿರುದ್ಧವೇ ಬಳಸಿದೆ. ಎಲ್ಲಾ ಐದ...

ನಾಳೆ ಎಲ್‌...

ದೇಶಗಳಲ್ಲಿ "ಮಾನವಹಕ್ಕು" ಮತ... "ಪ್ರಜಾಪ್ರಭುತ್ವ"ವನ್ನು ನಿರೀಕ್ಷಿಸಲು ವಿ... ಸಂಸ್ಥೆ ಮತ್ತು OAS (ಅಮೆರಿಕನ್... ಮುಂದುವರಿದ ಘಟ್ಟದಲ್ಲಿರುವುದು... ಎಲ್‌ಸಾಲ್ವಡೋರ್‌ನ FMLN (ಫರ... ಬುಂಡೋ ಮಾರ್ತಿ ವಿಮೋಚನಾ ರಂಗ... ಇತ್ತೀಚಿನ ತಿಂಗಳುಗಳಲ್ಲಿ ವಿಮೋಚನಾ... ಹೋರಾಟದಲ್ಲಿ ತೀವ್ರ ಮುನ್ನಡೆ ಸಾಧಿ...ಸಿದೆ. 1988 ನವೆಂಬರ್ 1ರಂದು ಅಮೆ...



ಅಂತರಾಷ್ಟ್ರೀಯ ಕರ್ತವ್ಯದಲ್ಲಿ ಕ್ಯೂಬಾ ಸಂಗಾತಿ

ಮಿನುಗುತಲಿ ಕೆಂಪು ಚುಕ್ಕಿಯು
ಮುಗಿಲಂಚನಲ್ಲಿ
ರಾತ್ರಿಯಾಗದ ದಟ್ಟ ಕತ್ತಲೆಯು
ಸೀಳಿ ಹೋಳೆಯುತ್ತಿತ್ತು
ಈ ನೆಲದಗಲದ ಮಣ್ಣು-ಮಣ್ಣಿಗೂ
ಬೆಳಕು ಚೆಲ್ಲುತ್ತಿತ್ತು

-ವಿಲಾ ಕೆ.

ದಕ್ಷಿಣ ಅಮೆರಿಕಾದಲ್ಲಿ

ಕಳೆದ ಒಂದು ವರ್ಷದಲ್ಲಿ ದಕ್ಷಿಣ ಅಮೆರಿಕಾದ ಹಲವು ದೇಶಗಳಲ್ಲಿ ಭಾರೀ ರಾಜಕೀಯ ಏಳುಬೀಳುಗಳು ನಡೆದಿವೆ. ಸಾಮಾನ್ಯವಾಗಿ ಇದು ಹೆಚ್ಚಿನ ಪ್ರಜಾಪ್ರಭುತ್ವದತ್ತ ಸಾಗಿದೆ ಎನ್ನಬಹುದು.

ಬೊಲಿವಿಯ, ಬ್ರೆಜಿಲ್, ಉರುಗುವೆ ಮತ್ತು ಪರಾಗುವೆಗಳಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರಿಗಳು ಮಣ್ಣುಮುಕ್ಕಿದ್ದಾರೆ. ಅರ್ಜೆಂಟಿನಾದಲ್ಲಿ ಮಿಲಿಟರಿ ಕ್ಷಿಪ್ರ ಕ್ರಾಂತಿಯೊಂದು ವಿಫಲವಾಯಿತು. ಅದರ ಪರಿಣಾಮವಾಗಿ ಸೈನ್ಯವನ್ನು ರಾಜಕೀಯದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲಾಗಿದೆ. ಇಕ್ವಡೋರ್‌ನಲ್ಲಿ ಬಲಪಂಥೀಯ ಶಕ್ತಿಗಳು ಚುನಾವಣೆ ಸೋತಿವೆ. ಮೆಕ್ಸಿಕೊದಲ್ಲಿ ಎಡ ಪಕ್ಷಗಳು ರಾಜಧಾನಿಯಲ್ಲೇ ಚುನಾವಣೆ ಗೆದ್ದಿವೆ. ಆದರೆ ಇವೆಲ್ಲಕ್ಕಿಂತ ಮಿಗಿಲಾಗಿ-ಚಿಲಿಯ ಪಿನೋಚೆ ನಡೆಸಿದ ಅಣಕು 'ಮತ ಸಂಗ್ರಹ'ದಲ್ಲೇ ಅವನ ಸೋಲು ಅತ್ಯಂತ ಗಮನಾರ್ಹವಾದದ್ದು. ಪಿನೋಚೆ ರಾಜೀನಾಮೆ ಕೊಡಬೇಕು ಮತ್ತು 1990ರಲ್ಲಿ ಚುನಾವಣೆ ನಡೆಯಬೇಕು ಎಂಬ ಚಳುವಳಿ ಚಿಲಿಯಲ್ಲಿ ನಡೆಯುತ್ತಿದೆ. ವಿರೋಧ ಪಕ್ಷದ ನಾಯಕರ ಕಾರ್ಯಕರ್ತರ ಬಂಧನ, ಚಿತ್ರಹಿಂಸೆ ದಮನ ಮುಂದುವರೆದಿದೆ.

ಕೊಲಂಬಿಯಾದಲ್ಲಿ 'ಸೈಮನ್ ಬೊಲಿವರ್ ರಾಷ್ಟ್ರೀಯ ಸಮನ್ವಯ ಸಮಿತಿ' ಮತ್ತು "ದೇಶಪ್ರೇಮಿ ಒಕ್ಕೂಟ" ಎಂಬ ವಿಶಾಲರಂಗ ರಚಿಸಲಾಗಿದೆ. ಇದು ಅಮೆರಿಕನ್ ಕೈಗೊಂಬೆ ಸರ್ಕಾರದ ವಿರುದ್ಧ ತೀವ್ರ ಹೋರಾಟದಲ್ಲಿ ನಿರತವಾಗಿದೆ.